# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಫೆಬ್ರವರಿ 24, 2022

ಸಂಪುಟ : 48 ಸಂಚಿಕೆ : 285 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಶಿಕ್ಷಣಕ್ಕೆ ನೆಲೆಗಟ್ಟಾಗಿ ಸಂಸ್ಕಾರ ಅಗತ್ಯ

### ಶ.ಸಾ.ಪ. ಪದಾಧಿಕಾರಿಗಳ ಸೇವಾ ದೀಕ್ಷೆ ಕಾರ್ಯಕ್ರಮದಲ್ಲಿ ಪಂಡಿತಾರಾಧ್ಯ ಶ್ರೀ

ದಾವಣಗೆರೆ, ಫೆ.23- ಶಿಕ್ಷಣಕ್ಕೆ ನೆಲೆಗಟ್ಟಾಗಿ ಸಂಸ್ಕಾರ ಇರಬೇಕು. ಸಂಸ್ಕಾರವಿಲ್ಲದ ಶಿಕ್ಷಣ ಮನುಷ್ಯನನ್ನು ರಾಕ್ಷಸರನ್ನಾಗಿ ಮಾಡುವ ಸಾಧ್ಯತೆ ಹೆಚ್ಚಾಗಿದೆ ಎಂದು ಸಾಣೇಹಳ್ಳಿಯ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದಾವಣಗೆರೆ ನಗರ ಘಟಕದ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ ಹಾಗೂ ಶರಣ ಚಿಂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಾಲ್ಯದಿಂದಲೇ ಒಳ್ಳೆಯ ಸಂಸ್ಕಾರಗಳು ಬಂದಾಗ ಬಸವಣ್ಣನವರು ಹೇಳಿದಂತೆ ಅಂತರಂಗ-ಬಹಿರಂಗ ಶುದ್ಧಿ ಸಾಧ್ಯ. ಮಕ್ಕಳಿಗೆ ನಿಜವಾದ ಸಂಸ್ಕಾರ ಕೊಡಬೇಕಾದರೆ ಮೊದಲು ನಾವು ಸಂಸ್ಕಾರ ಪಡೆದಿಬೇಕು. ಆದರೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿರುವು ದರಿಂದ ಸಂಸ್ಕಾರ ಮರೆಯಾಗುತ್ತಿದೆ. ಹೆತ್ತವರಿಗೆ ಸಂಸ್ಕಾರ ಕೊಡುವಷ್ಟು ವ್ಯವಧಾನವಿಲ್ಲವಾಗಿದೆ. ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸಿದರೆ ಹೊಣೆಗಾರಿಕೆ ಮುಗಿಯಿತು ಎಂದು ಭಾವಿಸಿದ್ದಾರೆ. ಇನ್ನು ಗುರುಗಳೂ ಸಹ ಭಕ್ತರ ಅಜ್ಞಾನ ಕಳೆದು, ಸುಜ್ಞಾನದ ಕಡೆ ಕರೆದೊಯ್ಯುವ (2ನೇ ಪುಟಕ್ಕೆ)

## ಸಾಮರಸ್ಯ ಸಮಾಜದ ನಿರ್ಮಾಣಕ್ಕೆ ಶರಣ ಸಾಹಿತ್ಯ ಶ್ರಮಿಸಲಿ: ಈಶ್ವರಪ್ಪ

ದಾವಣಗೆರೆ, ಫೆ.23- ಬಸವಾದಿ ಶಿವಶರಣರ ಆಶಯಗಳನ್ನು ಗಾಳಿಗೆ ತೂರಿ ಅಧರ್ಮದ ಹಾದಿಯಲ್ಲಿರುವ ಜನತೆಗೆ ತಿಳಿವಳಿಕೆ ನೀಡುವ ಮೂಲಕ ಸಾಮರಸ್ಯದ ಸಮಾಜ ನಿರ್ಮಿಸುವ ಕೆಲಸವನ್ನು ಶರಣ ಸಾಹಿತ್ಯ ಪರಿಷತ್ ಮಾಡಲಿ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಅಧ್ಯಕ್ಷ ಎಂ.ಜಿ .ಈಶ್ವರಪ್ಪ ಆಶಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರೀತಿ, ವಿಶ್ವಾಸ, ಸಾಮರಸ್ಯದಿಂದ ಬದುಕಬೇಕು ಎಂಬ ಬಸವಾದಿ ಶರಣರ ಮಾತುಗಳನ್ನು ಗಾಳಿಗೆ ತೂರಿ ಮನುಷ್ಯರೇ ಅಲ್ಲವೆನ್ನುವಷ್ಟರ ಮಟ್ಟಿಗೆ ಬದುಕಲಾಗುತ್ತಿದೆ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂದು ಹೇಳಿದ ಎಲ್ಲಾ ಬೇಡಗಳನ್ನು (2ನೇ ಪುಟಕ್ಕೆ)

# ವಾಣಿಜ್ಯ ಉದ್ದೇಶದ ಬ್ಯಾಂಕ್ ಸೇವೆ ಪಡೆಯುವವ ಗ್ರಾಹಕನಲ್ಲ

**ಸುಪ್ರೀಂ ಕೋರ್ಟ್**

ನವದೆಹಲಿ, ಫೆ. 23 – ವಾಣಿಜ್ಯ ಉದ್ದೇಶಕ್ಕಾಗಿ ಬ್ಯಾಂಕ್ ಸೇವೆ ಪಡೆಯುವ ವ್ಯಕ್ತಿ ಗ್ರಾಹಕನಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಗ್ರಾಹಕರ ರಕ್ಷಣಾ ಕಾಯ್ದೆಯಡಿ ಬರಬೇಕಾದರೆ, ಓರ್ವ ವ್ಯಕ್ತಿ ಸೇವೆಗಳನ್ನು ಸ್ವ ಉದ್ಯೋಗದ ಮೂಲಕ ತನ್ನ ಜೀವನಾಧಾರಕ್ಕಾಗಿ ಮಾತ್ರ ಬ್ಯಾಂಕ್ ಸೇವೆ ಬಳಸುತ್ತಿರುವುದಾಗಿ ಸಾಬೀತು ಪಡಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಇಂತಹ ಪ್ರಕರಣಗಳಲ್ಲಿ ಸಿದ್ಧ ಉತ್ತರ ಇರುವುದಿಲ್ಲ. ಪ್ರತಿಯೊಂದು ಪ್ರಕರಣದ ಅಂಶಗಳನ್ನು ಪರಿಗಣಿಸಿ ನಿರ್ಧಾರ ತೆಗೆದು ಕೊಳ್ಳಬೇಕಾಗುತ್ತದೆ ಎಂದು ನ್ಯಾಯ ಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ ಹೇಳಿದೆ.

2002ರ ಗ್ರಾಹಕರ ರಕ್ಷಣಾ ಕಾಯ್ದೆಯಿಂದ ವಾಣಿಜ್ಯ ವಹಿವಾಟುಗಳನ್ನು ಉದ್ದೇಶಪೂರ್ವಕವಾಗಿ ಹೊರಗಿಡಲಾಗಿದೆ. ಆದರೆ, ಇದೇ ಕಾಯ್ದೆಯ ಅನ್ವಯ ಸೇವೆಗಳನ್ನು ಸ್ವ ಉದ್ಯೋಗದ ಜೀವನಾ ಧಾರಕ್ಕೆ ಬಳಸುವವರನ್ನು ಗ್ರಾಹಕರು ಎಂದು ಪರಿಗಣಿಸಲಾಗುವುದು ಎಂದು ನ್ಯಾಯಾಲಯ ಹೇಳಿದೆ. ಶ್ರೀಕಾಂತ್ ಜಿ. ಮಂತ್ರಿ ಎಂಬ ಸ್ಟಾಕ್ ಬ್ರೋಕರ್ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಓವರ್‌ಡ್ರಾಫ್ಟ್ ಸೌಲಭ್ಯ ಪಡೆದಿದ್ದರು. ಈ ಸೇವೆಗೆ ಸಂಬಂಧಿಸಿದಂತೆ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಸರಳ ಉತ್ಸವ



ಕೊಟ್ಟೂರು, ಫೆ.23- ಪಟ್ಟಣದ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವದ ಪೂರ್ವ ಭಾವಿ ಉತ್ಸವಗಳು ಸೋಮವಾರದಿಂದ ಆರಂಭಗೊಂಡಿದ್ದು, 2ನೇ ಉತ್ಸವ ಮಂಗಳವಾರ ರಾತ್ರಿ ನವಿಲು ವಾಹನೋತ್ಸವದೊಂದಿಗೆ ನಡೆಯಿತು.

ಕೋವಿಡ್ ಹಿನ್ನೆಲೆಯಲ್ಲಿ ರಥೋತ್ಸವವನ್ನು ಕಡಿಮೆ ಜನರ ಪಾಲ್ಗೊಳ್ಳುವಿಕೆಯಲ್ಲಿ ನೆರವೇರಿಸಲು ನಿರ್ಧರಿಸಿದ್ದು, ಇದರ ಅಂಗವಾಗಿ ಶ್ರೀ ಸ್ವಾಮಿಯ ಧಾರ್ಮಿಕ ಕಾರ್ಯಕ್ರಮಗಳು ಸರಳವಾಗಿ ನಡೆಯುತ್ತಿವೆ.

2ನೇ ಉತ್ಸವವನ್ನು ಬೆಳ್ಳಿ ರಥದಲ್ಲಿ ದೇವಸ್ಥಾನದ ಪೂಜಾ ಬಳಗ ಶ್ರೀ ಸ್ವಾಮಿಯನ್ನು ಕುಳ್ಳಿರಿಸಿದ ನಂತರ ಜಯಕಾರಗಳೊಂದಿಗೆ ಕೊಟ್ಟೂರೇಶ್ವರ ಸ್ವಾಮಿಯ ಉತ್ಸವ ಮಂಗಳವಾರ ರಾತ್ರಿ 10.30ಕ್ಕೆ ಆರಂಭಗೊಂಡು ಕರಿಗಲ್ಲು, ತೊಟ್ಟಿಲುಮಠ ಮತ್ತು ಗಚ್ಚಿನಮಠದವರೆಗೆ ಸಾಗಿ ಮುಕ್ತಾಯಗೊಂಡಿತು.

**ದೀಡು ನಮಸ್ಕಾರ :** ಭಕ್ತರು ಶ್ರೀ ಸ್ವಾಮಿಗೆ (2ನೇ ಪುಟಕ್ಕೆ)

## ಹರ್ಷ ಹತ್ಯೆ ಪ್ರಕರಣ : ಎನ್.ಐ.ಎ. ತನಿಖೆಗೆ ಪರಿಶೀಲನೆ

### ಪೊಲೀಸ್ ವರದಿ ನಂತರ ಮುಖ್ಯಮಂತ್ರಿ ನಿರ್ಧಾರ

ಬೆಂಗಳೂರು, ಫೆ. 23 - ಶಿವಮೊಗ್ಗದ ಹರ್ಷ ಕೊಲೆ ಪ್ರಕರಣವನ್ನು ಕೇಂದ್ರ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಿದೆ.

ಸುದ್ದಿಗಾರರೊಂದಿಗೆ ಇಂದಿಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ಮೊದಲು ಪೊಲೀಸ್‌ನವರು ಪೂರ್ಣ ತನಿಖೆ ಮಾಡಿ ವರದಿ ನೀಡಲಿ. ಇಂತಹ ಪ್ರಕರಣಗಳಿಗೆ ಇತಿಶ್ರೀ ಹಾಡಬೇಕಾಗಿರುವುದರಿಂದ ಪೊಲೀಸ್ ವರದಿ ನೋಡಿಕೊಂಡು, ಕೇಂದ್ರ ತನಿಖಾ ತಂಡಕ್ಕೆ ವಹಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದರು.

ಶಿವಮೊಗ್ಗದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಕಾಪಾಡುವುದು ನಮ್ಮ ಆದ್ಯತೆಯಾಗಿದೆ. ಕರ್ಫ್ಯೂ ಸಹ ಜಾರಿಯಲ್ಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಇದು ಸರ್ಕಾರಿ ಪ್ರಾಯೋಜಿತ ಮೆರವಣಿಗೆ, ಸೆಕ್ಷನ್ 144 ಉಲ್ಲಂಘನೆಯಾಗಿದೆ ಎಂದು ಕಾಂಗ್ರೆಸ್ ಆರೋಪ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ, ಕಾಂಗ್ರೆಸ್‌ನವರು ಈ ಹಿಂದೆ ಸರ್ಕಾರಿ ಪ್ರಾಯೋಜಿತ ಕೆಲಸಗಳನ್ನು ಮಾಡಿದ್ದಾರೆ, ಅದರ ಅನುಭವದಿಂದ ಆ ಮಾತುಗಳು ಆಡುತ್ತಿದ್ದಾರೆ ಎಂದರು.

ಈ ಮಧ್ಯೆ, (2ನೇ ಪುಟಕ್ಕೆ)

## ಸಿ.ಬಿ.ಎಸ್.ಇ. ಪರೀಕ್ಷೆ ಪ್ರಶ್ನಿಸಿದ್ದ ಅರ್ಜಿ ತಿರಸ್ಕೃತ

ನವದೆಹಲಿ, ಫೆ. 23 – ಸಿ.ಬಿ.ಎಸ್.ಇ. ಹಾಗೂ ಇತರೆ ಮಂಡಳಿಗಳು ನಡೆಸುವ 10 ಹಾಗೂ 12ನೇ ತರಗತಿಯ ಆಫ್‌ಲೈನ್ ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ದಾಖಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಇಂತಹ ಅರ್ಜಿಗಳಿಂದಾಗಿ ಪರೀಕ್ಷೆ ಬರೆಯ ಲಿರುವ ವಿದ್ಯಾರ್ಥಿಗಳಿಗೆ ಹುಸಿ ಆಶಾವಾದ ಸಿಗುತ್ತದೆ ಎಂದಿರುವ ನ್ಯಾಯಾಲಯ, ಅಧಿಕಾರಿಗಳು ಪರೀಕ್ಷೆಯ ಬಗ್ಗೆ ಇನ್ನೂ ಸೂಕ್ತ ನಿರ್ಧಾರವೇ ತೆಗೆದುಕೊಳ್ಳದಿರುವಾಗ ಅವಸರದಲ್ಲಿ ಅರ್ಜಿ ದಾಖಲಿಸಲಾಗಿದೆ ಎಂದು ತಿಳಿಸಿದೆ. (3ನೇ ಪುಟಕ್ಕೆ)


॥ ಶ್ರೀ ಕೃಷ್ಣ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ**



ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು
ನಂ. 3683/43, ಪಾರ್ಕ್ ಹತ್ತಿರ, ಆಂಜನೇಯ ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 13.02.2022ನೇ ಭಾನುವಾರ ಬೆಳಗಿನ ಜಾವ ನನ್ನ ಪೂಜ್ಯ ಪತಿಯವರಾದ
**ಶ್ರೀ ಪಿ. ಗಜಪತಿ**
Rtd., AEE (Irrigation)
ಇವರು ನಿಧನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಸಮಾರಾಧನೆ"ಯನ್ನು
ದಿನಾಂಕ : 25.02.2022ನೇ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಯರಬಳ್ಳಿ ತಾಂಡಾದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಪೂಜಾರ್ ವಂಶಸ್ಥರು ಹಾಗೂ ಬಂಧು-ಮಿತ್ರರು, ಯರಬಳ್ಳಿ ತಾಂಡಾ, ಹರಪನಹಳ್ಳಿ ತಾಲ್ಲೂಕು
ಫೋ. : +91 99000 09777, 98866 68616, 91644 42384

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಬಸವೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ**



ಶ್ರೀಮತಿ ಶ್ರೀ ಗುರುರಾಜ್ ಸೊಪ್ಪಿನ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 16.02.2022ನೇ ಬುಧವಾರ ರಾತ್ರಿ 11.30ಕ್ಕೆ ನನ್ನ ಪೂಜ್ಯ ತಾಯಿಯವರಾದ
**ಶ್ರೀಮತಿ ಶಶಿಕಲಾ ಎಸ್.ಎಂ.**
(ದುರ್ಗಾಂಬಿಕ ದೇವಸ್ಥಾನದ ಕಾರ್ಯದರ್ಶಿಗಳಾದ ದಿ. ಸೊಪ್ಪಿನ ಮರಿಯಪ್ಪ ನವರ ಧರ್ಮಪತ್ನಿ)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 24.02.2022ರ ಗುರುವಾರ ಬೆಳಿಗ್ಗೆ 9.48ಕ್ಕೆ ಪಿ.ಜೆ. ಬಡಾವಣೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ
ಶ್ರೀಮತಿ ರೂಪಾದೇವಿ ಶ್ರೀ ಸೊಪ್ಪಿನ ಗುರುರಾಜ್
ಮೊಮ್ಮಗ ಗಣೇಶ್ ಜಿ. ಸೊಪ್ಪಿನ್
ಶ್ರೀಮತಿ ಅನ್ನಪೂರ್ಣ ಶ್ರೀ ಸುರೇಶ್ ರೊಡ್ಡಣ್ಣನವರ್
ಶ್ರೀಮತಿ ನೇತ್ರಾವತಿ ಶ್ರೀ ರಾಮಕೃಷ್ಣ ಹದಡಿ ಹಾಗೂ ಬಂಧು-ಮಿತ್ರರು.

**ಶಿವಗಣಾರಾಧನೆ ಆಹ್ವಾನ**



ಶ್ರೀಮತಿ ಗಿರಿಜಮ್ಮ
ಶ್ರೀ ದಿ॥ ಬಸವರಾಜಪ್ಪ ಎಮ್ಮಿ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 20.02.2022 ರಂದು ಸಂಜೆ 06.30ಕ್ಕೆ ನಮ್ಮ ಸೊಸೆ
**ಶ್ರೀಮತಿ ಕಲಾ ಸತೀಶ್ ಎಮ್ಮಿ**
ನನ್ನ ಮಗ ಶ್ರೀ ಸತೀಶ್ ವೈ.ಬಿ. ಇವರ
ಧರ್ಮಪತ್ನಿ ಸ್ವರ್ಗಸ್ಥರಾದ ಪ್ರಯುಕ್ತ ದಿನಾಂಕ : 24.02.2022ರ ಗುರುವಾರ
"ಕೈಲಾಸ ಸಮಾರಾಧನೆ"ಯನ್ನು
ಎ.ವಿ.ಕೆ. ಕಾಲೇಜು ರಸ್ತೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿರುತ್ತದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಸತೀಶ್ ವೈ.ಬಿ. ಶ್ರೀಮತಿ ಶ್ರುತಿ ಶರತ್ ವೈ.ಎಸ್.
ಕುಮಾರಿ ಶಾಲಿನಿ ವೈ.ಎಸ್. ಮತ್ತು ಎಮ್ಮಿ ಕುಟುಂಬದವರು
ಹಾಗೂ ಬಂಧು-ಮಿತ್ರರು. ಫೋ. : 98441 37228

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

**ಆರನೇ ವರ್ಷದ ಪುಣ್ಯಸ್ಮರಣೆ**

**ಶ್ರೀಮತಿ ಕೆ.ಎನ್. ಗುರುಶಾಂತಮ್ಮನವರು**



ನಿಧನ : 24.02.2016

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ....

- ಸುಲ್ತಾನಿಪುರದ ಎಸ್.ಜಿ. ದೇವೇಂದ್ರಪ್ಪ ಮತ್ತು ಮಕ್ಕಳು ಸೊಸೆಯಂದಿರು ಹಾಗೂ ಮೊಮ್ಮಕ್ಕಳು
- ಸುಲ್ತಾನಿಪುರ ಶ್ರೀಮತಿ ರತ್ನಮ್ಮ, ಶ್ರೀ ಜಿ.ಎನ್. ಕುಬೇರಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
- ಶ್ರೀಮತಿ ವನಜಾಕ್ಷಮ್ಮ, ಶ್ರೀ ಆರ್. ಲೋಕೇಶ್ವರಪ್ಪ ಮತ್ತು ಮಕ್ಕಳು, ಚಿಕ್ಕವ್ವನಾಗ್ತಿಹಳ್ಳಿ.
- ಶ್ರೀಮತಿ ಮನೋಹರಿ, ಶ್ರೀ ಎಂ.ಎನ್. ಶಿವನಾಗಪ್ಪ ಮತ್ತು ಮಕ್ಕಳು, ಬೆಳವನೂರು.
- ಶ್ರೀಮತಿ ಲತಾ, ಶ್ರೀ ಆರ್. ಬಸವರಾಜಪ್ಪ, ಶಿಕ್ಷಕರು ಮತ್ತು ಮಕ್ಕಳು, ಈಚಗಟ್ಟ.
- ಶ್ರೀಮತಿ ಅಕ್ಕಮ್ಮ, ಶ್ರೀ ಕೆ.ಎನ್. ಶಿವಕುಮಾರ್ ಮತ್ತು ಮಕ್ಕಳು, ಗೋಪನಾಳು.
- ಮೆ॥ ಜಿ.ಕೆ. ಎಂಟರ್‌ಪ್ರೈಸಸ್, ಎಪಿಎಂಸಿ ಯಾರ್ಡ್, ಎ ಬ್ಲಾಕ್, ದಾವಣಗೆರೆ.

ಮೊ. : 93410 04946, 98865 55937

Chennai Kumaran Exhibition and **Sale** in Davangere

1955
KUMARAN SILK
TRADERS
JAYA NAGAR, BENGALURU

VARAM
BOUTIQUE JEWELS
92.5 SILVER JEWELLERY



LOCATION
Southern Star Hotel, Davangere

DATE
25th, 26th, 27th Feb. 2022
10.00 am to 9.00 pm
Kanchipuram Silk Sarees in Lowest Price

EXCLUSIVE DISCOUNT 5 to 10%

New No. 15, Old No. 653, 11th C Main Road, 5th Block, JayaNagar, Bengaluru-560041
Phone : 080-26631300, Cell - 88677 92923

# ಕುಣೆಬೆಳಕೆರೆ : ನಾಳೆ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ



ಮಲೇಬೆನ್ನೂರು, ಫೆ.23- ಕುಣೆಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಉದ್ಘಾಟನೆ ಹಾಗೂ ಗೋಪುರದ ಕಳಸಾರೋಹಣ ಮತ್ತು ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವವನ್ನು ನಾಡಿದ್ದು ದಿನಾಂಕ 25ರ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಭೋವಿ ಅಂಜಿನಪ್ಪ, ಗ್ರಾಮದ ಮುಖಂಡ ಚನ್ನಪ್ಪ ಗೌಡ್ರು ತಿಳಿಸಿದ್ದಾರೆ.

ಮಂಗಳವಾರ ಪಟ್ಟಣದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಅಂದು ಬೆಳಗ್ಗೆ 12.30ಕ್ಕೆ ಜರುಗುವ ಜನಜಾಗೃತಿ ಧಾರ್ಮಿಕ ಸಮಾರಂಭದ ದಿವ್ಯ ನೇತೃತ್ವವನ್ನು ಶ್ರೀಮದ್ ರಂಭಾಪುರಿ ಜಗದ್ಗುರುಗಳು ವಹಿಸಲಿದ್ದಾರೆ ಎಂದು ದೇವಸ್ಥಾನ ಸಮಿತಿ ಉಪಾಧ್ಯಕ್ಷ ಸುಂಕದರ ನಿಂಗಪ್ಪ, ಮಡಿವಾಳರ ಮಲ್ಲೇಶಪ್ಪ ತಿಳಿಸಿದ್ದಾರೆ.

## ನಾಳೆ ಜಿಲ್ಲಾ ಕಿವುಡರ ಸಂಘದ ಸತ್ಯಾಗ್ರಹ

ದಾವಣಗೆರೆ, ಫೆ.23- ಜಿಲ್ಲಾ ಕಿವುಡರ ಸಂಘದಿಂದ ವಾಕ್ ಮತ್ತು ಶ್ರವಣ ದೋಷವುಳ್ಳ ವ್ಯಕ್ತಿಗಳ ಮೂಲಭೂತ ಹಕ್ಕು ಸೌಕರ್ಯಕ್ಕೆ ಆಗ್ರಹಿಸಿ ನಾಡಿದ್ದು ದಿನಾಂಕ 25 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಯದೇವ ವೃತ್ತದಲ್ಲಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ.

# 'ನನ್ನನ್ನು ಕಳ್ಳ ಎತ್ತು, ಮುದಿ ಎತ್ತು ಎಂದು ಕರೆದರೆ, ಹೆಡೆಮುರಿ ಕಟ್ಟಿ ಬಿಸಾಕುತ್ತೇನೆ ಹುಷಾರ್ !'

## ಹೊನ್ನಾಳಿ ಶಾಸಕ ರೇಣುಕಾಚಾರ್ಯಗೆ ಮಾಜಿ ಶಾಸಕ ಶಾಂತನಗೌಡ ಎಚ್ಚರಿಕೆ



ಹೊನ್ನಾಳಿ,ಫೆ.23- ಇನ್ನು ಮುಂದೆ ನನ್ನ ವಿಚಾರವಾಗಿ ಮಾತನಾಡಬೇಕಾದರೆ ತಲೆ ಸರಿ ಇಟ್ಟುಕೊಂಡು ಮಾತಾಡಬೇಕು, ಇಲ್ಲದಿದ್ದರೆ ಹೆಡೆಮುರಿ ಕಟ್ಟಿ ಬಿಸಾಕುತ್ತೇನೆ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಅವರಿಗೆ ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಎಚ್ಚರಿಕೆ ನೀಡಿದ ಘಟನೆ ಸೋಮವಾರ ನಡೆಯಿತು.

ಸಚಿವ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಗೆ ಆಗ್ರಹಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದ ಅವರು, ತಾಲ್ಲೂಕಿನ ಮಾಸಡಿ ಗ್ರಾಮದಲ್ಲಿ 'ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ' ಸಮಾರಂಭದಲ್ಲಿ ರೇಣುಕಾಚಾರ್ಯ ನನ್ನನ್ನು ಹಾಗೆ ಕರೆದಿದ್ದಾರೆ. ನನಗೆ ಮುದಿ ಎತ್ತು, ಕಳ್ಳ ಎತ್ತು ಎನ್ನುತ್ತೀಯಾ ಎಂದು ಆಕ್ರೋಶಭರಿತರಾಗಿ ಮಾತನಾಡಿದರು.

ನನಗೆ 73 ವರ್ಷ, ನಿನಗೆ ತಾಕತ್ತಿದ್ದರೆ ಬಾ ನನ್ನ ಜೊತೆಗೆ ರನ್ನಿಂಗ್ ರೇಸ್ ಮಾಡಲಿಕ್ಕೆ, ನನ್ನ ಜೊತೆಗೆ ಹೆಜ್ಜೆ ಹಾಕು, ಇಬ್ಬರೂ ವಾಕಿಂಗ್ ಹೋಗೋಣ ಎಂದು ಆಹ್ವಾನ ಕೊಟ್ಟ ಸಂಗತಿಯೂ ನಡೆಯಿತು.

ನಾನು ಈ ಹಿಂದೆ ರೇಣುಕಾಚಾರ್ಯ ಮತ್ತು ಅವರ ತಾಲ್ಲೂಕು ಆಡಳಿತದ ಬಗ್ಗೆ ಭ್ರಷ್ಟಾಚಾರ ಕುರಿತು ಸಾರ್ವಜನಿಕ ಚರ್ಚೆಗೆ ಆಹ್ವಾನಿಸಿದ್ದೆ, ಈಗಲೂ ಆಹ್ವಾನಿಸುತ್ತೇನೆ, ಹಿರೇಕಲ್ಮಠಕ್ಕೆ ಬಾ ಎಂದು ಸವಾಲು ಹಾಕಿದರು.

ಈಶ್ವರಪ್ಪ ಒಬ್ಬ ಹಿರಿಯ ರಾಜಕಾರಣಿ. ಅವರು ರಾಷ್ಟ್ರ ಧ್ವಜಕ್ಕೆ ಅವಮಾನ ಮಾಡುವಂತಹ ಹೇಳಿಕೆ ಕೊಡಬಾರದು. ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಿಸುತ್ತೇನೆ ಎನ್ನುವ ಅವರ ಹೇಳಿಕೆ ಸಂವಿಧಾನ, ಕಾನೂನು ಬಾಹಿರ ಎಂದು ಶಾಂತನಗೌಡ ಹೇಳಿದರು.

ಕಾಂಗ್ರೆಸ್ ಹಿರಿಯ ಮುಖಂಡ ಬಿ. ಸಿದ್ದಪ್ಪ, ಡಾ. ಈಶ್ವರನಾಯ್ಕ, ಜಿ.ಪಂ. ಸದಸ್ಯ ಡಿ.ಜಿ. ವಿಶ್ವನಾಥ್, ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಎ. ಗದ್ದಿಗೇಶ್, ತಾಲ್ಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಚೀಲೂರು ವಾಜೀದ್, ದಿಡಗೂರು ತಮ್ಮಣ್ಣ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಎಚ್. ಡಿ.ವಿಜೇಂದ್ರಪ್ಪ, ಎಚ್.ಬಿ. ಅಣ್ಣಪ್ಪ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗೇಂದ್ರಪ್ಪ ಹಾಗು ಇತರರಿದ್ದರು.

# ಹತ್ಯೆ ಪ್ರಕರಣ : ಎನ್.ಐ.ಎ. ತನಿಖೆಗೆ ಪರಿಶೀಲನೆ

**(1ನೇ ಪುಟದಿಂದ)** ಶಿವಮೊಗ್ಗ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ಉಸ್ತುವಾರಿ ನಾರಾಯಣಗೌಡ,ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಸಂಪೂರ್ಣ ವರದಿ ನೀಡಿದ ನಂತರ, ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು , ಪ್ರಕರಣವನ್ನು ಕೇಂದ್ರ ತನಿಖಾ ತಂಡಕ್ಕೆ ವಹಿಸುವ ಮುನ್ಸೂಚನೆ ನೀಡಿದರು.

ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಶಿವಮೊಗ್ಗ ಪ್ರಕರಣದ ಹಿಂದೆ ಕೆಲವು ರಾಷ್ಟ್ರ ವಿರೋಧಿ ಸಂಘಟನೆಗಳ ಕೈವಾಡದ ಶಂಕೆ ಇದೆ ಎಂದರು.

ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ, ಶಿವಮೊಗ್ಗ ನಗರದ ದೊಡ್ಡಪೇಟೆ ಹಾಗೂ ಕೋಟೆ ಪೊಲೀಸ್ ಠಾಣೆಯ ಪೊಲೀಸರ ಬಗ್ಗೆಯೂ ತನಿಖೆ ನಡೆಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಲಿಖಿತ ಆದೇಶ ನೀಡಿದ್ದೇನೆ ಎಂದಿದ್ದಾರೆ.

ಎರಡೂ ಠಾಣಾ ವ್ಯಾಪ್ತಿಯಲ್ಲಿ ಕೆಲವರ ಮೇಲೆ ಬಹಳ ಪ್ರಕರಣಗಳಿದ್ದರೂ, ಅಂತಹವರ ಮೇಲೆ ಪೊಲೀಸರು ಕ್ರಮ ತೆಗೆದುಕೊಳ್ಳದೇ ಇರುವುದು ಅನುಮಾನಕ್ಕೆ ಎಡೆಮಾಡಿದೆ. ಈ ಠಾಣಾ ವ್ಯಾಪ್ತಿಯ ಕ್ರಿಮಿನಲ್ ಹಿನ್ನೆಲೆಯುಳ್ಳವರೇ ಹರ್ಷನ ಕೊಲೆ ಮಾಡಿದ್ದಾರೆ, ಈಗಾಗಲೇ ಬಂಧಿತರಾಗಿರುವವರೆಲ್ಲರೂ ಇಲ್ಲಿಯವರೇ. ಈಗಾಗಲೇ ಎಂಟು ಮಂದಿಯನ್ನು ಬಂಧಿಸಿದ್ದು, ಇನ್ನು ಕೆಲವರನ್ನು ವಶಕ್ಕೆ ಪಡೆದು, ವಿಚಾರಣೆ ಮಾಡಲಾಗುತ್ತಿದೆ ಎಂದವರು ಹೇಳಿದ್ದಾರೆ.

ಮುಂದೆ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಲು, ಕೆಲವು ಬಿಗಿ ಕ್ರಮ ಕೈಗೊಳ್ಳಲು ಮತ್ತು ಕೊಲೆಯ ಹಿಂದಿನ ಶಕ್ತಿಗಳನ್ನು ಕಂಡು ಹಿಡಿಯಲು ಹಿರಿಯ ಪೊಲೀಸ್ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ ಎಂದು ಗೃಹ ಸಚಿವರು ತಿಳಿಸಿದರು.

# ಭಜರಂಗದಳದ ಸಹ ಸಂಯೋಜಕ ಹರ್ಷ ಹತ್ಯೆ ಖಂಡಿಸಿ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 23- ಶಿವಮೊಗ್ಗದ ಭಜರಂಗದಳದ ಸಹ ಸಂಯೋಜಕ, ದೇಶಭಕ್ತ ಹರ್ಷ ಅವರನ್ನು ದೇಶದ್ರೋಹಿ ಸಂಘಟನೆಗಳು ಹತ್ಯೆ ಮಾಡಿರುವುದನ್ನು ಖಂಡಿಸಿ, ಪಟ್ಟಣದಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಇಲ್ಲಿನ ಕೋಟೆ ಆಂಜನೇಯ ದೇವಸ್ಥಾನದ ಆವರಣದಿಂದ ಹೊಸಪೇಟೆ ರಸ್ತೆ ಮೂಲಕ ಪ್ರವಾಸಿ ಮಂದಿರ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಅಲ್ಲಿ ಬಹಿರಂಗ ಸಭೆ ನಡೆಸಿದರು.

ವಿಹೆಚ್‌ಪಿ ತಾಲ್ಲೂಕು ಅಧ್ಯಕ್ಷ ಹೆಚ್. ಎಂ. ಜಗದೀಶ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಮುಖಂಡರಾದ ಎಂ.ಪಿ. ನಾಯ್ಕ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುವರ್ಣ ನಾಗರಾಜ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಾಗಳಿ ಕೊಟ್ರೇಶಪ್ಪ, ಜಿ. ನಂಜನಗೌಡ, ಜೆ. ಓಂಕಾರಗೌಡ, ನಿಟ್ಟೂರು ಸಣ್ಣ ಹಾಲಪ್ಪ, ಚಂದ್ರಶೇಖರ ಪೂಜಾರ, ಶಿರಗಾನಹಳ್ಳಿ ವಿಶ್ವನಾಥ, ರಾಘವೇಂದ್ರ ಶೆಟ್ಟಿ, ಆರ್. ಲೋಕೇಶ್, ಲಿಂಬ್ಯಾನಾಯ್ಕ, ಕುಸುಮಾ ಜಗದೀಶ್, ಮಲ್ಲೇಶ, ಓಂಕಾರಗೌಡ, ಆರ್‌ಎಸ್‌ಎಸ್‌ನ ಸತ್ಯನಾರಾಯಣ, ರಾಹುಲ್, ಮಂಜಾನಾಯ್ಕ, ನಿಟ್ಟೂರು ಸುರೇಶ್, ಅಶೋಕ ಹಿಂದೂಸ್ಥಾನ್, ಹಾಲೇಶ್ ಹಿಂದೂಸ್ಥಾನ್, ಸುರೇಂದ್ರ ಮಂಚಾಲಿ, ಕೆ. ಮಂಜುನಾಥ, ಮಂಜ್ಯನಾಯ್ಕ, ಲಿಂಬ್ಯನಾಯ್ಕ, ಕಿರಣ್ ಶ್ಯಾನಭೋಗ್, ರಾಘವೇಂದ್ರ ಶೆಟ್ಟಿ, ಕುಸುಮಾ ಜಗದೀಶ, ಲತಾ ನಾಗರಾಜ, ಬಾಗಳಿ ಎನ್. ಮಂಜುನಾಥ, ಬಣಕಾರ ಜಗದೀಶ, ಆಲೂರು ಶ್ರೀನಿವಾಸ, ಮ್ಯಾಕಿ ಅಜ್ಜಯ್ಯ, ಎನ್. ಸುರೇಶ್, ಮಲ್ಲೇಶ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ಇಂದು ಖೋ-ಖೋ ತಂಡಗಳ ಆಯ್ಕೆ ಪ್ರಕ್ರಿಯೆ

ಖೋ-ಖೋ ಫ್ರೆಂಡ್ಸ್ ಗ್ರೂಪ್ ಇವರ ವತಿಯಿಂದ ಜಿಲ್ಲೆಯ ಪುರುಷರ ವಿಭಾಗದ ಖೋ-ಖೋ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಸಂಜೆ 4 ಗಂಟೆಗೆ ನಡೆಯಲಿದೆ.

ಮಾರ್ಚ್ 6 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಪುರುಷರ ವಿಭಾಗದ ಖೋ-ಖೋ ಜಿಲ್ಲಾ ಲೀಗ್ ಪಂದ್ಯಾವಳಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ವಿವರಕ್ಕೆ ಕೆ.ರವಿ (96207-24806), ಎ.ಬಿ. ಸಿದ್ದೇಶ್ (97439-27252), ಕೆ. ಪ್ರವೀಣ (95900-16079), ಮರುಳಸಿದ್ದಪ್ಪ (81052-62830)ಇವರನ್ನು ಸಂಪರ್ಕಿಸಬಹುದು.

# ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಸರಳ ಉತ್ಸವ



**ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯನ್ನು ನವಿಲು ವಾಹನದೊಂದಿಗೆ ಬೆಳ್ಳಿ ರಥದಲ್ಲಿ ಆಸೀನಪಡಿಸಿ ಮಂಗಳವಾರ ರಾತ್ರಿ ಸರಳವಾಗಿ ಶಾಸ್ತ್ರಬದ್ದವಾಗಿ ಉತ್ಸವ ನಡೆಸಲಾಯಿತು.**

**(1ನೇ ಪುಟದಿಂದ)** ಹರಕೆ ಹೊತ್ತು ತಮ್ಮ ನಿವಾಸ ಅಥವಾ ಮಹಾದ್ವಾರದ ಬಳಿಯಿಂದ ಹಿರೇಮಠದವರೆಗೆ ದೀಡು ನಮಸ್ಕಾರ ಸೇವೆ ಸಲ್ಲಿಸಿದರು. ರಥೋತ್ಸವದ ದಿನದ ಕಾರಣಕ್ಕಾಗಿ ಕಳೆದ ಹತ್ತಾರು ದಿನಗಳಿಂದ ಮಾಂಸ ಪ್ರಿಯರು ತಮ್ಮ ಆಹಾರ ಸೇವನೆಯನ್ನು ಬದಲಾಯಿಸಿಕೊಂಡು ಕೇವಲ ಸಸ್ಯಹಾರಿ ಆಹಾರವನ್ನು ಸೇವಿಸುವಲ್ಲಿ ತೊಡಗಿಕೊಂಡಿದ್ದಾರೆ.

ರಥೋತ್ಸವದಲ್ಲಿ ಹೆಚ್ಚಿನ ಜನ ಸೇರದಂತೆ ಪೊಲೀಸರು ತೇರು ಬಯಲಿನುದ್ದಕ್ಕೂ ಬ್ಯಾರಿಕೇಡ್‌ಗಳನ್ನು ನಿರ್ಮಿಸಿದ್ದಾರೆ ಹೊರಗಿನ ಭಕ್ತರು ಆಗಮಿಸದಂತೆ ಬಿಗಿಯಾದ ಕಾವಲನ್ನು ಕಾಯಲು ಪಟ್ಟಣದ ಹೊರ ಪ್ರದೇಶಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಹಾಕಲಾಗಿದೆ. ಸುಮಾರು 500 ಕ್ಕೂ ಹೆಚ್ಚು ಪೊಲೀಸರು ಸೇರಿದಂತೆ ಕೆ.ಎಸ್.ಆರ್.ಪಿ., ಡಿ.ಎ.ಆರ್, ಪೊಲೀಸ್ ಸೇವೆಯನ್ನು ಬಂದೋಬಸ್ತ್ ಕಾರ್ಯಕ್ಕೆ ನಿಯೋಜಿಸಿಕೊಳ್ಳಲು ಈಗಾಗಲೇ ತಯಾರಿ ಕೈಗೊಂಡಿರುವುದಾಗಿ ಸರ್ಕಲ್ ಇನ್ಸ್‌ಪೆಕ್ಟರ್ ಸೋಮಶೇಖರ್ ಹೆಚ್. ಕೆಂಚಾರೆಡ್ಡಿ ತಿಳಿಸಿದರು.

# ಶಿಕ್ಷಣಕ್ಕೆ ನೆಲೆಗಟ್ಟಾಗಿ ಸಂಸ್ಕಾರ ಅಗತ್ಯ

**(1ನೇ ಪುಟದಿಂದ)** ಕಾರ್ಯ ಮಾಡುತ್ತಿಲ್ಲ ಎಂದು ಹೇಳಿದರು.

ಧರ್ಮದ ನೆಲೆಗಟ್ಟಿನ ಮೇಲೆ ಬದುಕು ಕಟ್ಟಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಭಾರತ ಧರ್ಮದ ನಾಡು, ಅಧ್ಯಾತ್ಮದ ಬೀಡು. ಸರ್ವ ಜನಾಂಗದ ಶಾಂತಿಯ ತೋಟ ಎಂದೆಲ್ಲಾ ಹೇಳುತ್ತೇವೆ. ಆದರೆ, ಶಾಂತಿ ಇಲ್ಲವಾಗಿದೆ. ಪರಸ್ಪರ ದ್ವೇಷ ಹೆಚ್ಚಾಗಿದೆ. ಧರ್ಮವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ಧರ್ಮದ ಹೆಸರಿನಲ್ಲಿ ಜಗಳ ವಾಡುವ, ಪ್ರಾಣ ತೆಗೆಯುವ, ರಕ್ತ ಸುರಿಸುವ, ಅಶಾಂತಿ ಬೆಳೆಸುವ ದುಷ್ಟ ಮನಸ್ಥಿತಿಯನ್ನು ಗಳಿಸಿಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಯಾವ ಧರ್ಮವೂ ಹಿಂಸೆಯನ್ನು ಪ್ರಚೋದಿಸುವುದಿಲ್ಲ. ಜಾತಿಯ ಮನೋಭಾವ ಕಿತ್ತು ಹಾಕಿ ಒಂದಾಗಿ ಬಾಳಬೇಕು ಎಂಬುದು ಪ್ರತಿಯೊಂದು ಧರ್ಮದ ಸಾರವಾಗಿದೆ. ಶಾಂತಿ, ಅಹಿಂಸೆ, ಪ್ರೇಮ, ಸತ್ಯ, ಪ್ರಾಮಾಣಿಕತೆಯನ್ನು ಧರ್ಮ ಹೇಳುತ್ತದೆ. ಇವುಗಳನ್ನೇ ಮೌಲ್ಯ ಎಂದು ತಿಳಿದು ಬಾಳಿದರೆ ಮಾತ್ರ ಬದುಕಿಗೆ ಭವ್ಯತೆ ಬರಲು ಸಾಧ್ಯ ಎಂದು ಹೇಳಿದರು.

ಮೇಲೆ ಬೆಳಕು, ಒಳಗೆ ಕೊಳಕು ಆದರೆ ಪ್ರಯೋಜನವಿಲ್ಲ. 'ಮೇಲೆ ಬಸಪ್ಪ ಒಳಗೆ ವಿಷಪ್ಪ' ಆಗದೆ ಮೇಲೆ ಹಾಗೂ ಒಳಗಡೆ ಎರಡರಲ್ಲೂ ಬಸಪ್ಪ ಆಗಬೇಕು. ಆಗ ಮಾತ್ರ ಸುಂದರ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ ಎಂದರು.

ನಾವು ಶರಣರ ಸ್ಥಾನ ತುಂಬುವ ಕೆಲಸ ಮಾಡಬೇಕು. ಅಂತಹ ವ್ಯಕ್ತಿತ್ವ ಕಟ್ಟಬೇಕು. ಅದಕ್ಕೆ ಬೇಕಾದ ವಾತಾವರಣ ನಿರ್ಮಿಸಬೇಕು. ಆಗ ಮಾತ್ರ ಶರಣರು ನಮ್ಮ ಮೂಲಕ ಉದಯಿಸಿ ಬರಲು ಸಾಧ್ಯ. ಈ ಕೆಲಸ ನಿರಂತರವಾಗಿ ನಡೆಯಬೇಕಿದೆ. ಈ ನೆಲೆಯಲ್ಲಿ ಶರಣ ಸಾಹಿತ್ಯ ಪರಿಷತ್ ಕೇವಲ ಸಮಾರಂಭಗಳನ್ನು ಮಾಡದೆ ಜನರನ್ನು ಸನ್ಮಾರ್ಗದೆಡೆ ಕರೆದೊಯ್ಯಬೇಕು. ಸಂಸ್ಕಾರ ನೀಡುವ ಕೆಲಸ ನಡೆಸಬೇಕು ಎಂದು ಶ್ರೀಗಳು ಹೇಳಿದರು.

ಅನಸೂಯದೇವಿ ಟಿ.ಎಸ್. ಪಟೇಲ್ ಸೇವಾ ದೀಕ್ಷೆ ನೀಡಿದರು. ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಘಟಕದ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಎಂಜಿನಿಯರ್ ಎ.ಹನುಮಂತಪ್ಪ ಅನುಭಾವ ನುಡಿಗಳನ್ನಾಡಿದರು. ಬಿ.ದಿಳ್ಯೆಪ್ಪ ಇತರರು ಉಪಸ್ಥಿತರಿದ್ದರು.

## ಸೇವಾದೀಕ್ಷೆಗೆ ಪೂರಕವಾಗಿ ಇಷ್ಟ ಲಿಂಗದೀಕ್ಷೆಯಾಗಲಿ

ಶರಣ ಸಾಹಿತ್ಯ ಪರಿಷತ್ ಪದಾಧಿಕಾರಿಗಳಿಗೆ ಸೇವಾದೀಕ್ಷೆಗಿಂತ ಮೊದಲು ಲಿಂಗದೀಕ್ಷೆಯಾಗಬೇಕಿದೆ. ಲಿಂಗದೀಕ್ಷೆಗೆ ಮೊದಲ ಆದ್ಯತೆ ನೀಡಿ. ಬೇಕಾದರೆ ಇಲ್ಲಿಯೇ ಕಾರ್ಯಕ್ರಮ ಆಯೋಜಿಸಿದರೆ ನಾವೇ ಬಂದು ಲಿಂಗದೀಕ್ಷೆ ನೀಡುತ್ತೇವೆ. ಅಥವಾ ಪ್ರತಿ ತಿಂಗಳು ಒಂದನೇ ತಾರೀಖು ಸಾಣೇಹಳ್ಳಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಲಿಂಗದೀಕ್ಷೆ ಪಡೆಯಬಹುದು. ಆ ಮೂಲಕ ನಿಮ್ಮ ಮನೆಯ ಸದಸ್ಯರಿಗೂ ಆ ಸಂಸ್ಕಾರ ಕೊಡಬೇಕು ಎಂದು ಪಂಡಿತಾರಾಧ್ಯ ಶ್ರೀಗಳು ಹೇಳಿದರು.

## ಸಾಮರಸ್ಯ ಸಮಾಜದ ನಿರ್ಮಾಣಕ್ಕೆ ಶರಣ ಸಾಹಿತ್ಯ ಶ್ರಮಿಸಲಿ

**(1ನೇ ಪುಟದಿಂದ)** ಬೇಕುಗಳನ್ನೇ ಇಟ್ಟುಕೊಂಡು ಜೀವಿಸುತ್ತಿರುವ ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ ಹೊಣೆ ಹೆಚ್ಚಾಗಿದೆ ಎಂದು ಹೇಳಿದರು.

ಕೆಟ್ಟ ಕೆಲಸಗಳನ್ನು ಮರೆ ಮಾಚಲು ಇಷ್ಟ ಲಿಂಗ ಪೂಜೆ, ದೇವ ಸ್ಥಾನಕ್ಕೆ ಹೋಗುವ ಕೆಲಸ ಹೆಚ್ಚಾಗಿದೆ. ಮನಸ್ಸು ಪಾರದರ್ಶಕವಾಗಿದ್ದರೆ ಅಲ್ಲಿಗೆ ಹೋಗುವ ಅಗತ್ಯವೇ ಇರುವುದಿಲ್ಲ ಎಂದು ಅಭಿಪ್ರಾಯಿಸಿದ ಅವರು, ಪೂಜೆ ಮಾಡುವ ಜೊತೆಗೆ ನಡೆ-ನುಡಿ ಎರಡೂ ಒಂದಾಗಿದ್ದರೆ ಮಾಡಿದ ಪೂಜೆಯ ಜೊತೆಗೆ ನಮ್ಮ ಬದುಕು ಹಾಗೂ ಸುತ್ತ ಮುತ್ತಲಿನವರ ಬದುಕೂ ಸಾರ್ಥಕವಾಗುತ್ತದೆ ಎಂದು ಹೇಳಿದರು.


**ಬೇಕಾಗಿದ್ದಾರೆ**
ನಾರ್ಥ್, ಸೌತ್ ಇಂಡಿಯನ್ ಅಡುಗೆ ಭಟ್ಟರು, ಕ್ಲೀನಿಂಗ್ ಹೆಲ್ಪರ್ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
90601 72745

**ಮಾರಾಟಕ್ಕೆ/ಖರೀದಿಗೆ ವಿಚಾರಿಸಿರಿ**
ಪಿ.ಜೆ. ಬಡಾವಣೆ, 27x69 ಮನೆ, 30x38 ಕೆಳಗೆ ಎರಡು ಮನೆ, ಒಂದನೇ ಮಹಡಿಯಲ್ಲಿ ಒಂದು ಮನೆ, ಎರಡನೇ ಮಹಡಿಯಲ್ಲಿ ಎರಡು ರೂಂ. 30x80 ಪಶ್ಚಿಮಕ್ಕೆ ಸೈಟ್.
ಸುರೇಶ್ 95911 60520

**REQUIRED**
Sales executive for SERVO Lubricants in Chitradurga area.
For details please contact
79759 56930

**ಸೈಟುಗಳು ಮಾರಾಟಕ್ಕಿವೆ**
J.H. ಪಟೇಲ್ ಬಡಾವಣೆಯಲ್ಲಿ 20x30 ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಬಾಲಾಜಿ ನಗರದಲ್ಲಿ 30x50 ಪೂರ್ವ.
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಬೇಕಾಗಿದ್ದಾರೆ**
ಡಿಗ್ರಿ ಆದ ಸೀನಿಯರ್ ಪರ್ಸನ್ಸ್ (ವಯಸ್ಸು 30-50 ವರ್ಷ) Medical Representative ಗೆ ಬೇಕಾಗಿದ್ದಾರೆ.
94483 19083
91106 64995

**ಬೇಕಾಗಿದ್ದಾರೆ**
ದಾವಣಗೆರೆ ಕ್ಲಬ್‌ಗೆ ವೆಜ್ ಮತ್ತು ನಾನ್ ವೆಜ್ (ಮಿಲ್ಟ್ರಿ ಸ್ಟೈಲ್) ಹೋಟೆಲ್ ನಡೆಸುವವರು ಬೇಕಾಗಿದ್ದಾರೆ. ಸಂಪರ್ಕಿಸಿ
89714 63739
94825 27446

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಕ್ಯಾಷಿಯರ್ ಹಾಗೂ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಜೆ.ಓ.ಸಿಂಥೆಟಿಕ್ಸ್ ದೊಡ್ಡಪೇಟೆ, ದಾವಣಗೆರೆ.
93807 53339

**ಸೈಟುಗಳು ಮಾರಾಟಕ್ಕಿವೆ.**
ಸರ್ಕಾರಿ ನೌಕರರ ಬಡಾವಣೆ, 30x33 ಉತ್ತರ, 40 ಅಡಿ ರಸ್ತೆ, ಇಂಡಸ್ಟ್ರೀಯಲ್ ಏರಿಯಾ 1st stage, ಕಾರ್ನರ್ ಸೈಟುಗಳು. 30x40 ಪೂರ್ವ-ದಕ್ಷಿಣ ಕಾರ್ನರ್, 30x40 ಪಶ್ಚಿಮ- ದಕ್ಷಿಣ ಕಾರ್ನರ್, ಹೊಸ Sir M.V.College ಹತ್ತಿರ, 30x56 ದಕ್ಷಿಣ, ಭೂಮಿಕಾ ಬಡಾವಣೆ 30x30 ಪಶ್ಚಿಮ, ಪ್ರಕಾಶ್ ಏಜೆಂಟ್(ಸರಸ್ವತಿ ಬಡಾವಣೆ)
99161 49674

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಅನುಭವವಿರುವ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ಜಯನಗರ, SSI ಆಸ್ಪತ್ರೆ ರೋಡ್, ದಾವಣಗೆರೆ.
78999 91860

**SBI Life Insurance**
ಕಂಪೆನಿ ವಿಮಾ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿದೆ. "ಯಾರೂ ಬೇಕಾದರೂ ಸೇರಬಹುದು" * ನಿವೃತ್ತ ನೌಕರರು * ಪಿಗ್ಮಿ ಏಜೆಂಟರು* ಶಿಕ್ಷಕರು* ಸೇಲ್ಸ್ ಎಕ್ಸಿಕ್ಯೂಟಿವ್ಸ್. ವಿದ್ಯಾರ್ಹತೆ:ಪಿಯುಸಿ/ಪದವಿ. ಸೌಲಭ್ಯಗಳು: 1) ಆಕರ್ಷಕ ಕಮೀಷನ್, ವೇತನ, ಆರೋಗ್ಯ ವಿಮೆ 2)ತಿಂಗಳಿಗೆ 10 ಸಾವಿರ ಪೆನ್ಶನ್. Ravi kumar M.G, Agency Manager SBI Life Ins. DVG
95358 10209

**ಸೈಟು ಮಾರಾಟಕ್ಕಿವೆ**
RTO ಆಫೀಸ್ ಎದುರುಗಡಿಗೆ 30x40 ರೆವಿನ್ಯೂ ಸೈಟ್, 20x30 ಅಲಿನೇಷನ್
93534 88902
95383 94042

**ಮನೆ ಬಾಡಿಗೆಗೆ ಇದೆ**
# 63, 1st Main, 1st Cross, ನಿಜಲಿಂಗಪ್ಪ ಲೇ ಔಟ್, ದಾವಣಗೆರೆ. ಸಸ್ಯಹಾರಿಗಳು ಮಾತ್ರ.
98455 67223
98808 27928

**ಮನೆಯ ವಾಸ್ತು ಸಮಸ್ಯೆಗಳಿಗೆ ಸುಲಭ ಪರಿಹಾರಗಳು**
ಉತ್ತರಾಭಿಮುಖವಾಗಿ ದೀಪ ಹಚ್ಚಿದರೆ ಧನ ಧಾನ್ಯ ಲಾಭ.(T&C) ಸಂಪರ್ಕಿಸಿ. ಕಲ್ಪತರು ಕನಸ್ಟ್ರಕ್ಷನ್ಸ್ ದಾವಣಗೆರೆ.
98455 83340

**ಸೈಟು ಮಾರಾಟಕ್ಕಿದೆ**
ದಾವಣಗೆರೆ MCC 'B' Block, 12 ನೇ ಮುಖ್ಯ ರಸ್ತೆ, ಸರ್ಕಾರಿ ನಿವೃತ್ತ ನೌಕರರ ಭವನದ ಹತ್ತಿರ, 47x120 ಅಳತೆ, ಒಟ್ಟು 8400 ಅಡಿ ಸೈಟ್ ಮಾರಾಟಕ್ಕಿದೆ.
94483 53127

**ಬೈಕ್ ಬೇಕಾಗಿದೆ**
Honda Activa , Suzuki Access, TVS Jupiter Used Bike ಬೇಕಾಗಿದೆ. ಸಂಪರ್ಕಿಸಿ.
91489 33445

**ಆಫೀಸ್ ಕ್ಲೀನ್ ಮಾಡಲು ಮಹಿಳೆ ಬೇಕಾಗಿದ್ದಾರೆ**
ಆಸಕ್ತಿವುಳ್ಳವರು ಸಂಪರ್ಕಿಸಿ
ಸಂಪರ್ಕಿಸುವ ಸಮಯ :
ಬೆಳಿಗ್ಗೆ 11.00 ರಿಂದ 5.30ರವರೆಗೆ
ಫೋ.: 08192 254736

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,450/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000
97392 15000

**Required**
Boys / Ladies hostel warden, Telecalling only for ladies (experience in institution), reception also.
Location:- Davangere
87628 67557

**ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ**
ಪಿ.ಬಿ. ರಸ್ತೆ, ಜಿಎಂಐಟಿ ಕಾಲೇಜು ಮುಂದೆ 22 ಅಗಲ 100 ಅಡ್ಡಿ ಉದ್ದ ದಕ್ಷಿಣ ದಿಕ್ಕಿರುವ ಹೋಟೆಲ್ /ಮನೆ ಬಿಲ್ಡಿಂಗ್ ಮಾರಾಟಕ್ಕಿದೆ. ಸಂಪರ್ಕಿಸಿ
90085 25785

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಅನುಭವ ಇರುವ / ಇಲ್ಲದವರು ಸಂಪರ್ಕಿಸಿ. ವಯಸ್ಸು :18 ರಿಂದ 35, ಡಿಗ್‌ಜಾಮ್ ಲೇಡಿಸ್ ವೇರ್, ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ
89518 96908

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸಂಪರ್ಕಿಸಿ :
S.T. ಸೋಮಶೇಖರ
98803 37686

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಲೀಸ್‌ಗೆ ಇದೆ**
2 BHK ವಿತ್ ಅಟ್ಯಾಚ್ ಹಾಗೂ ಎಲ್ಲಾ ಸೌಲಭ್ಯಗಳಿರುವ Ist Floor, 30x40 ಅಳತೆಯ ಮನೆ ಲೀಸ್‌ಗೆ ಇದೆ ಹಾಗೂ 1 BHK ವಿತ್ ಅಟ್ಯಾಚ್, 2nd Floor ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ: #389/G-54, S.S. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಹಿಂಭಾಗ, ಜಯನಗರ, ದಾವಣಗೆರೆ. ಮೊ: 98447 10844

**ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 17 ಕಿ.ಮೀ. ದೂರ ಶಿಂಗ್ರಿಹಳ್ಳಿ-ಹಳ್ಳಿಕೇರಿ ನಡುವೆ ಅಪೂಸ್ ಮಾವಿನತೋಟ 4 ಎಕರೆ, ತೆಂಗು ಮತ್ತು ಅಡಿಕೆ 3 ಎಕರೆ, 2 ಬೋರ್‌ವೆಲ್ ಡ್ರಿಪ್, ತಂತಿ ಬೇಲಿ ರಸ್ತೆ ಇರುವ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ:
98809 33630

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC / PUC ಓದಿರುವ ಹಿಂದಿ ಭಾಷೆ ಬಲ್ಲ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ, ಆಕರ್ಷಕ ಸಂಬಳ ಕೊಡಲಾಗುವುದು.
94823 89317

**ಮನೆ, ಮಳಿಗೆ ಬಾಡಿಗೆಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್ ವುಳ್ಳ ಮೊದಲನೆ ಮಹಡಿಯಲ್ಲಿ 2 ಬೆಡ್ ರೂಂವುಳ್ಳ ಮನೆ ಮತ್ತು ಕೆಳಗಡೆ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ:
99161 79135, 90080 30330

**ಸೈಟು ಬೇಕಾಗಿದೆ**
ದಾವಣಗೆರೆಯ ಶಿವಕುಮಾರ ಸ್ವಾಮಿ ಮತ್ತು ವಿದ್ಯಾನಗರ ಬಡಾವಣೆಯಲ್ಲಿ ಸೈಟು ಬೇಕಾಗಿದೆ. ಮಾರುವವರು ಸಂಪರ್ಕಿಸಿರಿ.
98809 33630

**WANTED**
Banking Sector tele caller (Female Only)
Qualification - Any Degree/PUC
No.2257/5 2nd Floor, M.C.C 'A' Block
BesideTogataveera Kalyana Manatapa
96630 72555
Interview time : 11 AM

**ಬಾಡಿಗೆಗಿದೆ**
ಪಿ.ಜೆ. ಎಕ್ಸ್‌ಟೆನ್ಷನ್‌ನಲ್ಲಿ ನರ್ಸಿಂಗ್ ಹೋಮ್‌ಗೆ ಸೂಕ್ತವಾದ 70x40 ಜಾಗ ಬಾಡಿಗೆಗಿದೆ. ಬಾಪೂಜಿ ಆಸ್ಪತ್ರೆ ಹತ್ತಿರ, G + 1 Floor
ಆಸಕ್ತರು ಸಂಪರ್ಕಿಸಿ :
98862 62739, 63619 17504

**PG / HOSTEL Building ಬಾಡಿಗೆಗೆ**
15 Rooms with attached Bathrooms + Kitchen & Dining Hall.
Address : 6th Cross, BIET College Road, Near Bapuji High School, Davanagere.
99725 35329, 85531 84854

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ANARGYA ASSOCIATES**
BUILDING Planings
3D Desgins and
Material Contractor,
competative Price.
95351 11990

**ಬ್ರಾಹ್ಮಣ ವಧು ಬೇಕಾಗಿದೆ**
ಬಿ.ಎ. ಪದವೀಧರ 33 ವರ್ಷ ವಯಸ್ಸಿನ ಸ್ಮಾರ್ತ ಬ್ರಾಹ್ಮಣ ವರನಿಗೆ ವಧು ಬೇಕಾಗಿದೆ. ವರ ಸ್ವಉದ್ಯೋಗ , ಸ್ವಂತ ಮನೆ/ಆಸ್ತಿ ಸಹ ಇದೆ.ವರನ ಏಕೈಕ ಸಹೋದರಿಯ ವಿವಾಹ ಆಗಿದೆ.ತಂದೆ/ತಾಯಿ ಇದ್ದಾರೆ.ಸರಳ ಮದುವೆಗೆ ಆದ್ಯತೆ. ಮಕ್ಕಳಿಲ್ಲದ ವಿಚ್ಛೇದಿತ ಬ್ರಾಹ್ಮಣ ಮಹಿಳೆಯರು ಕೂಡ ಸಂಪರ್ಕಿಸಬಹುದು.
ಮೊ.98860 51239, 98862 81050

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649


॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**




**ದಿ॥ ಆಲದಹಳ್ಳಿ ಕೊಟ್ರಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ (22.02.2022ಕ್ಕೆ) 9 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ, ನೀವು ಹಾಕಿ ಕೊಟ್ಟ ಹಾದಿಯಲ್ಲಿ ಮುನ್ನಡೆಯುತ್ತಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,
**ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು,**
**ಆಲದಹಳ್ಳಿ ಸಿದ್ದರಾಮೇಶ್ವರ, ಆಲದಹಳ್ಳಿ ಶಿವಕುಮಾರ, ಆಲದಹಳ್ಳಿ ಜಗದೀಶ್,**
ನರಸರಾಜಪೇಟೆ, ಆಲದಹಳ್ಳಿ ಕಾಂಪ್ಲೆಕ್ಸ್, ದಾವಣಗೆರೆ -1.


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


**ಕುರ್ಕಿ ಗ್ರಾಮದ ಶ್ರೀಮತಿ ಮಲ್ಲಮ್ಮ ನಿಧನ**



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ ಹಂಚಿನಮನೆ ರೇವಣಸಿದ್ದಪ್ಪನವರ ಧರ್ಮಪತ್ನಿ ಶ್ರೀಮತಿ ಮಲ್ಲಮ್ಮ (56) ಇವರು ದಿನಾಂಕ 23.02.2022ರ ಬುಧವಾರ ಸಂಜೆ 7.40ಕ್ಕೆ ನಿಧನರಾದರು. ಪತಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.02.2022ರ ಗುರುವಾರ ಕುರ್ಕಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ಹೆಸರು ಬದಲಾವಣೆ**

ಶ್ರೀ ಮಹಾಂತೇಶ್ ನಾಯ್ಕ ಆರ್. ತಿಮ್ಮಣ್ಣನಹಳ್ಳಿ ತಾಂಡಾ, ವಲಸೆ ಅಂಚೆ, ಚಳ್ಳಕೆರೆ ತಾ॥ ಚಿತ್ರದುರ್ಗ ಜಿಲ್ಲೆ ವಾಸಿಯಾಗಿದ್ದು, ದಿನಾಂಕ : 12.03.2015 ರಂದು ನನ್ನ ಹೆಂಡತಿಯಾದ ಶ್ರೀಮತಿ ರೇಖಾಬಾಯಿ ಸಿ.ಎನ್. ಅವರನ್ನು ಸಂಜೀವಿನಿ ಆಸ್ಪತ್ರೆ, ದಾವಣಗೆರೆಯಲ್ಲಿ ಹೆರಿಗೆಗೆಂದು ದಾಖಲಿಸಿದ್ದು, ಅಂದು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಆದರೆ ಜನ್ಮ ಪ್ರಮಾಣ ಪತ್ರದಲ್ಲಿ ನಿಖಿಲ್ ವೀರ ಚೌವ್ಹಾಣ್ ಎಂ. ಎಂಬುದರ ಬದಲಾಯಿಸಿ, Virat .M. Naik Aliyas Nikhil Virat M. Naik ಎಂದು ತಪ್ಪಾಗಿ ನಮೂದಾಗಿದ್ದು, ಹಾಗೂ ವಿಳಾಸ : ತಿಮ್ಮಣ್ಣನಹಳ್ಳಿ ತಾಂಡಾ, ವಲಸೆ ಅಂಚೆ, ಚಳ್ಳಕೆರೆ ತಾ॥, ಚಿತ್ರದುರ್ಗ ಜಿಲ್ಲೆ. ಎಂಬುದರ ಬದಲಾಗಿ, ಚಿನ್ನಸಮುದ್ರ, ದಾವಣಗೆರೆ ತಾ॥ ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿನಾಂಕ: 23.02.2022 ರಂದು ನೋಟರಿ ದಾವಣಗೆರೆಯವರ ಸಮ್ಮುಖದಲ್ಲಿ ನನ್ನ ಮಗನ ಮುಂದಿನ ಎಲ್ಲಾ ದಾಖಲಾತಿಗಳಲ್ಲೂ ನಿಖಿಲ್ ವೀರ ಚೌವ್ಹಾಣ ಎಂ. ಇರುತ್ತದೆ ಎಂದು ಪ್ರಮಾಣಿಕರಿಸಿದ್ದೇನೆ

ಸಹಿ/- ಶ್ರೀ ಮಹಾಂತೇಶ್ ನಾಯ್ಕ

# ಜಗಳೂರು : ಡಿಎಸ್‌ಎಸ್ ನಕಲಿ ಹೋರಾಟಗಾರರು ಕಂಡಲ್ಲಿ ಮಾಹಿತಿ ಕೊಡಿ



ಜಗಳೂರು, ಫೆ. 23- ತಾಲ್ಲೂಕಿನಲ್ಲಿ ಕೆಲವರು ದಲಿತ ಸಂಘರ್ಷ ಸಮಿತಿ ಸಂಘಟನಾಕಾರರು ಎಂದು ಹೇಳಿಕೊಂಡು ತಮ್ಮ ಸ್ವಾರ್ಥ ಬದುಕಿಗಾಗಿ ಅಧಿಕಾರಿಗಳಿಂದ ಹಣ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ದಲಿತ ಸಂಘರ್ಷ ಸಮಿತಿ (ಪ್ರೊ. ಕೃಷ್ಣಪ್ಪ ಸ್ಥಾಪಿತ) ಸಂಘಟನೆಗೆ ಭರಮಸಮುದ್ರ ಗ್ರಾಮದ ಪಿ.ವೈ.ಮಲ್ಲೇಶ್ ಅಧಿಕೃತ ತಾಲ್ಲೂಕು ಸಂಚಾಲಕರಾಗಿದ್ದು, ಡಿಎಸ್‌ಎಸ್ ನಕಲಿ ಹೋರಾಟಗಾರರು ಕಂಡುಬಂದಲ್ಲಿ ಸಂಘಟನೆಗೆ ಮಾಹಿತಿ ಕೊಡಿ ಎಂದು ಡಿಎಸ್‌ಎಸ್ ಜಿಲ್ಲಾ ಉಪಾಧ್ಯಕ್ಷ ಜಿ.ಹೆಚ್. ಶಂಭುಲಿಂಗಪ್ಪ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ದಲಿತ ಸಂಘರ್ಷ (ಕೃಷ್ಣಪ್ಪ ಸ್ಥಾಪಿತ) ಸಮಿತಿಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಅಂಬೇಡ್ಕರ್ ಹೆಸರನ್ನು, ಕೃಷ್ಣಪ್ಪ ಅವರ ಆಶಯಗಳನ್ನು ಧಿಕ್ಕರಿಸಿ ಡಿಎಸ್ ಎಸ್ ವ್ಯಾಪಾರದ ಸರಕಿನಂತಾಗಬಾರದು. ಕೆಲ ವರ್ಷಗಳಿಂದ ಹೆಮ್ಮರವಾಗಿ ಬೆಳೆದಿದ್ದ ದಲಿತ ಸಂಘಟನೆ ಅಂಬೇಡ್ಕರ್ ಅವರ ಸಿದ್ಧಾಂತ ಅರಿಯದ ಕೆಲವರಿಂದ ಬದ್ಧತೆಯ ಹೋರಾಟ ಮರೆತಿದ್ದಾರೆ. ಜಿಲ್ಲಾಧ್ಯಕ್ಷ ಕುಂದುವಾಡ ಮಂಜುನಾಥ್ ಅವರ ಸಮ್ಮುಖದಲ್ಲಿ ನೂತನ ಸಮಿತಿ ರಚನೆಯಾಗಿದ್ದು, ಉಳಿದ ಯಾರೊಬ್ಬ ಅನಧಿಕೃತ ವ್ಯಕ್ತಿಗಳು ಡಿಎಸ್ ಎಸ್ ಸಂಘಟನೆ ಹೆಸರಿನಡಿ ಅಧಿಕಾರಿಗಳ ಸಾರ್ವಜನಿಕ ವಲಯದಲ್ಲಿ ಆಗಮಿಸಿದರೆ ತಾವು ನಮಗೆ ಮಾಹಿತಿ ಕೊಡಿ ಎಂದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ (ಪ್ರೊ.ಕೃಷ್ಣಪ್ಪ ಸ್ಥಾಪಿತ) ಸಂಘಟನೆ ಸಂಚಾಲಕ ಪಿ.ವೈ ಮಲ್ಲೇಶ್, ತಿಪ್ಪೇಸ್ವಾಮಿ, ಹೊನ್ನೂರಪ್ಪ, ಪಲ್ಲಾಗಟ್ಟೆ ಮಂಜಪ್ಪ, ಮಹಾಂತೇಶ್, ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸಿ.ಬಿ.ಎಸ್.ಇ.: ಅರ್ಜಿ ತಿರಸ್ಕೃತ

**(1ನೇ ಪುಟದಿಂದ)** ಅಧಿಕಾರಿಗಳು ನಿರ್ಧಾರ ತೆಗೆದುಕೊಳ್ಳಲಿ. ನಿರ್ಧಾರ ತಪ್ಪಾಗಿದ್ದರೆ ಅದನ್ನು ಪ್ರಶ್ನಿಸಬೇಕು. ಮುಂಚೆಯೇ ಎಲ್ಲವನ್ನೂ ನಿರ್ಧರಿಸಲು ಅರ್ಜಿ ದಾಖಲಿಸಲಾಗಿದೆ ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರ ನೇತೃತ್ವದ ಪೀಠ ಅರ್ಜಿ ದಾರರನ್ನು ತರಾಟೆಗೆ ತೆಗೆದುಕೊಂಡಿದೆ. ಪೀಠ ದಲ್ಲಿ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಹಾಗೂ ಸಿ.ಟಿ. ರವಿಕುಮಾರ್ ಇದ್ದಾರೆ.

# ಹಿಂದೂ ಕಾರ್ಯಕರ್ತ ಹರ್ಷ ಹತ್ಯೆಗೆ ಹಿಂಜಾವೇ ಖಂಡನೆ



ದಾವಣಗೆರೆ, ಫೆ.23- ಶಿವಮೊಗ್ಗದ ಹಿಂದೂ ಸಂಘಟನೆಯ ಕಾರ್ಯಕರ್ತ ಹರ್ಷನ ಹತ್ಯೆ ಖಂಡಿಸಿ ಹಿಂದೂ ಜಾಗರಣ ವೇದಿಕೆಯಿಂದ ನಗರದಲ್ಲಿಂದು ಪ್ರತಿಭಟಿಸಿ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತವಾಯಿತು.

ಜಯದೇವ ವೃತ್ತದಲ್ಲಿ ವೇದಿಕೆ ಮುಖಂಡ ಸತೀಶ್ ಪೂಜಾರಿ ನೇತೃತ್ವದಲ್ಲಿ ಜಮಾಯಿಸಿದ್ದ ಸಂಘಟನೆಯ ಕಾರ್ಯಕರ್ತರು, ಹರ್ಷನ ಹತ್ಯೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಲಾಯಿತು. ನಂತರ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ, ಉಪವಿಭಾಗಾಧಿಕಾರಿ ಮುಖಾಂತರ ಮನವಿ ಸಲ್ಲಿಸಲಾಯಿತು.

ಶಿವಮೊಗ್ಗದಲ್ಲಿ ಹಿಂದೂ ಕಾರ್ಯಕರ್ತ ಹರ್ಷನನ್ನು ಮತೀಯ ಶಕ್ತಿಗಳು ಕೊಲೆ ಮಾಡಿವೆ. ಈ ಪ್ರಕರಣದ ಜೊತೆಗೆ ಈ ಹಿಂದೆ ನಡೆದ ಎಲ್ಲಾ ಹಿಂದೂ ಕಾರ್ಯಕರ್ತರ ಕೊಲೆಗಳನ್ನು ಎನ್‌ಐಎ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ತಾಲಿಬಾನ್, ಐಸಿಸ್ ಮಾನಸಿಕತೆಯ ಇಸ್ಲಾಮಿಕ್ ಭಯೋತ್ಪಾದಕರ ಹೇಡಿತನದ ಹೇಯ ಕೃತ್ಯಕ್ಕೆ ಹರ್ಷ ಬಲಿಯಾಗಿದ್ದಾರೆ. ಮತಾಂಧ ಕೊಲೆಗಾರರನ್ನು ಮುಸ್ಲಿಂ ಸಮುದಾಯದವರು ಜಾರಿಯಾಗಲಿ ಎಂದು ಬಯಸುವ ಶರಿಯಾ ಕಾನೂನಿನಂತೆ ಶಿಕ್ಷೆಗೆ ಒಳಪಡಿಸುವಂತೆ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಸರ್ಕಾರವನ್ನು ಒತ್ತಾಯಿಸಿದರು.

ಈ ಕೊಲೆಯಲ್ಲಿ ಪಿಎಫ್ಐ ಮತ್ತು ಎಸ್‌ಡಿಪಿಐ ನೇರ ಭಾಗಿಯಾಗಿವೆ ಎಂಬ ಬಲವಾದ ಸಂದೇಹ ಇದ್ದು, ಈ ಸಂಘಟನೆಗಳನ್ನು ನಿಷೇಧ ಮಾಡಬೇಕು. ಹರ್ಷನ ಕುಟುಂಬಕ್ಕೆ ತಕ್ಷಣ 50 ಲಕ್ಷ ರೂ. ಪರಿಹಾರ ನೀಡಬೇಕು. ಕೋಮು ಗಲಭೆ ಎಬ್ಬಿಸಲು ಪ್ರಯತ್ನಿಸುತ್ತಿರುವ ಮತಾಂಧ ಶಕ್ತಿಗಳ ಸಂಚನ್ನು ಬಯಲಿಗೆಳೆಯಬೇಕು. ಮತೀಯ ಶಕ್ತಿಯಾದ ಎಸ್‌ಡಿಪಿಐ ಸಂಘಟನೆಯನ್ನು ಸರ್ಕಾರ ಬ್ಯಾನ್ ಮಾಡಬೇಕು. ಇಡೀ ದೇಶವನ್ನು ಇಸ್ಲಾಮೀಕರಣ ಮಾಡುವ ಸಂಚು ನಡೆದಿದೆ. ವಿದೇಶಿ ಶಕ್ತಿಗಳು ಸಹ ಕೈ ಜೋಡಿಸಿದ್ದು, ಇದನ್ನು ಬುಡ ಸಮೇತ ಕಿತ್ತು ಹಾಕಬೇಕು ಎಂದು ಆಗ್ರಹಿಸಿದರು.

ಹಿಂಜಾವೇ ಮುಖಂಡ ಸತೀಶ್ ಪೂಜಾರಿ ಮಾತನಾಡಿ, ದೇಶದಲ್ಲಿ ಮುಸ್ಲಿಂ ಸಮುದಾಯದ ಸಂಖ್ಯೆ ಹೆಚ್ಚಿ, ಅವರೇ ಹೆಚ್ಚಿನ ಸಂಖ್ಯೆಯಲ್ಲಿ ಜನಪ್ರತಿನಿಧಿಗಳಾದರೆ ಮುಂದೆ ಹಿಂದೂ ಜನಪ್ರತಿನಿಧಿಗಳ ಹತ್ಯೆಯೂ ನಡೆಯಬಹುದು. ಇದನ್ನು ಇನ್ನಾದರೂ ಮನಗಂಡು, ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವುದನ್ನು ಬಿಡಬೇಕು. ಹರ್ಷನನ್ನು ಕೊಲೆ ಮಾಡಿದ ವ್ಯಕ್ತಿಗಳಿಗೆ ಎನ್ ಕೌಂಟರ್ ಮಾಡಬೇಕು. ಈ ಸರ್ಕಾರ ಹಿಂದೂಗಳ ಹತ್ಯೆಗಳನ್ನು ಮಾಡಿದವರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹಿಂಜಾವೇ ಮುಖಂಡರಾದ ರಾಜು, ಹರೀಶ್ ಪವಾರ್, ಭೀಮಾ, ಗುರು, ಹೇಮಂತ ಮಹೇಂದ್ರಕರ್, ವಿಕಾಸ್, ವೀರೇಶ್, ಸಿದ್ದು, ಮಂಜುನಾಥ, ಗಿರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಶ್ರೀ ಪಂಜುರ್ಲಿ ಪ್ಯಾಲೇಸ್, ಲೀಲಾವತಿ ಕಲ್ಯಾಣ ಮಂಟಪ ಲೋಕಾರ್ಪಣೆ



ದಾವಣಗೆರೆ, ಫೆ.23- ಪಂಜುರ್ಲಿ ಗ್ರೂಪ್‌ನ 'ಶ್ರೀ ಪಂಜುರ್ಲಿ ಪ್ಯಾಲೇಸ್ ಹೋಟೆಲ್ ಹಾಗೂ ಲೀಲಾವತಿ ಕಲ್ಯಾಣ ಮಂಟಪವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಇಂಥದೊಂದು ವಿನೂತನ ಹೋಟೆಲ್ ನಗರಕ್ಕೆ ಬೇಕಾಗಿತ್ತು. ಇವರು ತಿಂಡಿ, ತಿನಿಸಿನ ಜೊತೆಗೆ, ಹೋಟೆಲ್ ಗೋಡೆಗಳ ಮೇಲೆ ಸಾಧಕರು, ಸ್ವಾತಂತ್ರ್ಯ ಹೋರಾಟಗಾರರ ಚಿತ್ರಪಟ ಮತ್ತು ಮಾಹಿತಿ ಬರೆಸುವ ಮೂಲಕ ಗ್ರಾಹಕರಿಗೆ ಜ್ಞಾನವನ್ನು ಉಣ ಬಡಿಸುವ ಪ್ರಯತ್ನ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಮನೋಹರ ತಹಶೀಲ್ದಾರ್, ಪಂಜುರ್ಲಿ ಗ್ರೂಪ್ ಆಫ್ ಹೋಟೆಲ್ಸ್ ಮಾಲೀಕರಾದ ರಾಜೇಂದ್ರ ಶೆಟ್ಟಿ, ಸಂದೀಪ್ ಆಳ್ವಾ, ಗಣೇಶ್ ಶೆಟ್ಟಿ, ರವಿಕಾಂತ ಶೆಟ್ಟಿ, ಶಶಿಕಾಂತ ಶೆಟ್ಟಿ, ರಾಜೇಶ್ ಶೆಟ್ಟಿ, ಅವಿನಾಶ್ ಶೆಟ್ಟಿ, ರಂಜಿತ್ ಶೆಟ್ಟಿ, ಉದಯ ಶೆಟ್ಟಿ, ನಾಗೇಶ್ ಪೂಜಾರಿ, ಉಣಕಲ್ ಪ್ರಕಾಶ್ ಶೆಟ್ಟಿ, ಆನಂದ ಹಿರೇಮಠ ಮತ್ತಿತರರಿದ್ದರು.

## ಎಸಿಬಿ ಅಧಿಕಾರಿಗಳಿಂದ ಇಂದು, ನಾಳೆ ತಾಲ್ಲೂಕು ಭೇಟಿ : ಅಹವಾಲು ಸ್ವೀಕಾರ

ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಎಸಿಬಿ ಪೊಲೀಸ್ ನಿರೀಕ್ಷಕ ಎಂ.ಕೆ. ರವೀಂದ್ರ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಹರಿಹರ ಪ್ರವಾಸಿ ಮಂದಿರ, ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ನ್ಯಾಮತಿ ತಹಶೀಲ್ದಾರರ ಕಚೇರಿಯಲ್ಲಿ ಉಪಸ್ಥಿತರಿರುವರು.

ಎಸಿಬಿ ಪೊಲೀಸ್ ನಿರೀಕ್ಷಕ ಸಿ. ಮಧುಸೂದನ್ ನಾಳೆ ದಿನಾಂಕ 25ರ ಶನಿವಾರಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಚನ್ನಗಿರಿ ಪ್ರವಾಸಿ ಮಂದಿರ, ಅದೇ ದಿನ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಹೊನ್ನಾಳಿ ಪ್ರವಾಸಿ ಮಂದಿರದಲ್ಲಿ ಉಪಸ್ಥಿತರಿರುವರು.

ವಿವರಕ್ಕೆ ದೂರವಾಣಿ ಸಂ: 08192-236600, ಮೊ: 94808 06283 ಅಥವಾ 9480806284 ಕ್ಕೆ ಸಂಪರ್ಕಿಸಬಹುದು ಎಂದು ಎಸಿಬಿ ಪೊಲೀಸ್ ಠಾಣೆ ಡಿವೈಎಸ್‌ಪಿ ಆರ್. ಮಂಜುನಾಥ್ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಉಚಿತ ಹೃದಯ ತಪಾಸಣಾ ಶಿಬಿರ

ಲಯನ್ಸ್ ಕ್ಲಬ್, ಸಮುದಾಯ ಆರೋಗ್ಯ ಕೇಂದ್ರ (ಮಲೇಬೆನ್ನೂರು), ತಾಲ್ಲೂಕು ಆರೋಗ್ಯ ಕೇಂದ್ರ (ಹರಿಹರ) ಹಾಗೂ ಎಸ್.ಎಸ್. ನಾರಾಯಣ ಹಾರ್ಟ್ ಸೆಂಟರ್ (ದಾವಣಗೆರೆ) ಇವರ ಸಂಯುಕ್ತಾಶ್ರಯ ದಲ್ಲಿ ಉಚಿತ ಹೃದಯ ತಪಾಸಣಾ ಶಿಬಿರವನ್ನು ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಹೃದಯ ಸಂಬಂಧಿ ಕಾಯಿಲೆ ಇರುವ ಹಿರಿಯ ನಾಗರಿಕರು ಮತ್ತು ಮಕ್ಕಳು ಈ ಉಚಿತ ಶಿಬಿರದ ಉಪಯೋಗ ಪಡೆದುಕೊಳ್ಳಲು ರೋಹಿಣಿ, ಡಾ. ಲಕ್ಷ್ಮಿ ದೇವಿ ವಿನಂತಿಸಿದ್ದಾರೆ.

## ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

ಕುಕ್ಕುವಾಡ, ಕೋಲ್ಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲ್ಲುಬಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನ ಹಳ್ಳಿ, ಹೂವಿನ ಮಡು, ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ ಹಾಗೂ ಸುತ್ತಮುತ್ತಲಿನ ಗ್ರಾಮ ಗಳು. ದೊಡ್ಡ ಮಲ್ಲಾಪುರ, ಸಿದ್ಧನ ಮಠ, ಕಾಕನೂರು, ಸಂತೆಬೆ ನ್ನೂರು, ಬೆಳ್ಳಿಗ ನೂಡು, ನಿಂಬಾ ಪುರ, ಅರಳಿಕಟ್ಟೆ, ತಣಿಗೆರೆ, ಚಿಕ್ಕಬೆನ್ನೂರು, ಹಿರೇಕೋಗ ಲೂರು, ದೊಡ್ಡಬ್ಬಿಗೆರೆ, ಅಬ್ಬಿಗೆರೆ, ಕೆರೆಬಿಳಚಿ, ಹೊಸೂರು, ಚನ್ನಾಪುರ, ಆಲೂರು, ಸೋಮ ಲಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳು. ಬಸವಾ ಪಟ್ಟಣ, ಹರ್ಲಿಪುರ, ಹೊಸಹಳ್ಳಿ, ಮರಬ ನಹಳ್ಳಿ, ಚಿರಡೋಣಿ, ಯಲ್ಲೋದ ಹಳ್ಳಿ, ಪುಣ್ಯಸ್ಥಳ, ಸಂಗಾಹಳ್ಳಿ, ಸಿದ್ದೇಶ್ವರ ನಗರ, ನಿಲೋಗಲ್, ಕಂಚುಗಾರನಹಳ್ಳಿ, ದಾಗಿನಕಟ್ಟೆ, ತ್ಯಾವಣಿಗಿ, ನಲ್ಕುದುರೆ, ದೊಡ್ಡ ಘಟ್ಟ, ಕತ್ತಲಗೆರೆ, ಕಾರಿಗನೂರು, ಬೆಳಲಗೆರೆ, ಹರೆಹಳ್ಳಿ, ನವಿಲೇಹಾಳು, ಕಬ್ಬಳ ಹಾಗೂ ಇತರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಪದ್ಮಾಂಬ ಜೈನ್ ಮಹಿಳಾ ಸಮಾಜದಿಂದ ಮಕ್ಕಳಿಗೆ ತಟ್ಟೆ ವಿತರಣೆ



ದಾವಣಗೆರೆ, ಫೆ. 23- ನಗರದ ಪದ್ಮಾಂಬ ಜೈನ್ ಮಹಿಳಾ ಸಮಾಜದಿಂದ ಬೂದಾಳ್ ರಸ್ತೆಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬಡ ಮಕ್ಕಳಿಗೆ ತಟ್ಟೆ ಹಾಗೂ ಕಾರ್ಡ್ ಬೋರ್ಡ್ ವಿತರಿಸಲಾಯಿತು.

ಸಮಾಜದ ಸಂಸ್ಥಾಪಕರಾದ ಉಷಾ ಜಯಪ್ರಕಾಶ್, ಅಧ್ಯಕ್ಷರಾದ ಕವಿತಾ ಧರಣೇಂದ್ರ ಪ್ರಸಾದ್ ನಿರ್ದೇಶಕ ರಾದ ಮಮತಾ ಸಂಪತ್, ಕಾರ್ಯದರ್ಶಿ ಕುಸುಮಾ ಸುನೀಲ್, ಖಜಾಂಚಿ ಚೇತನ ಪದ್ಮರಾಜ್, ಉಪಾಧ್ಯಕ್ಷ ರಾದ ವರ್ಷ ಹುಲಿ, ಸಹ ಕಾರ್ಯದರ್ಶಿ ಸುಷ್ಮಾ ಮೋಹನ್ ಹಾಗೂ ಎಲ್ಲ ಸದಸ್ಯರು ಉಪಸ್ಥಿತರಿದ್ದರು.

## ಸಂತ್ರಸ್ತರ ಸಹಾಯವಾಣಿ- 112 ಜಾರಿಗೆ

ದಾವಣಗೆರೆ, ಫೆ.23- ಮಾನವ ಕಳ್ಳ ಸಾಗಾಣಿಕೆ ಸಂತ್ರಸ್ತರ ರಕ್ಷಣೆಗೆ ತುರ್ತು ಸಹಾಯವಾಣಿ 112 ಸಂಖ್ಯೆಯನ್ನು ಜಾರಿಗೆ ತರಲಾಗಿದೆ. ಹೈಕೋರ್ಟ್ ವಿಶ್ರಾಂತ ನ್ಯಾಯಾಧೀಶರಾದ ಅಜಿತ್ ಜೆ.ಗುಂಜಾಲ್ ಅವರ ಅಧ್ಯಕ್ಷತೆಯಲ್ಲಿ 2021 ರ ಮಾರ್ಚ್ 09 ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಈ ಸಂಖ್ಯೆಯನ್ನು ಜಾರಿಗೆ ತರಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಕೊಟ್ಟೂರು ಪಾದಯಾತ್ರಿಗಳ ಅನುಕೂಲಕ್ಕೆ ರಸ್ತೆ ದುರಸ್ತಿ ಅವಶ್ಯ



ದಾವಣಗೆರೆ, ಫೆ.23- ಐತಿಹಾಸಿಕ ಕೊಟ್ಟೂರು ಶ್ರೀ ಗುರು ಬಸವೇಶ್ವರರ ರಥೋತ್ಸವಕ್ಕೆ ದಾವಣಗೆರೆಯಿಂದ ಸಾವಿರಾರು ಸಂಖ್ಯೆಯ ಭಕ್ತರು ಪ್ರತಿವರ್ಷ ಪಾದಯಾತ್ರೆಯ ಮೂಲಕ ತೆರಳಿ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಚಳಿ, ಗಾಳಿ, ಬಿಸಿಲು, ಚಿಕ್ಕ ಮಕ್ಕಳು, ದೊಡ್ಡವರು, ವಯೋವೃದ್ಧರೂ ಸೇರಿದಂತೆ ಎಲ್ಲಾ ವರ್ಗದವರು ಪಾದಯಾತ್ರೆಗೆ ಆಗಮಿಸುತ್ತಾರೆ.

ದಾವಣಗೆರೆಯಿಂದ ಕಂಚಿಕೆರೆಯ ಮೂಲಕ ತೌಡೂರುವರೆಗಿನ ರಸ್ತೆಯು ಉತ್ತಮವಾಗಿದ್ದು, ಅಲ್ಲಿಯವರೆಗೂ ನಡೆದಿದ್ದೇ ಗೊತ್ತಾಗುವುದಿಲ್ಲ. ಆದರೆ ತೌಡೂರಿನಿಂದ ಅರಸೀಕೆರೆಯವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಬರೀ ದೊಡ್ಡ ಜಲ್ಲಿ ಕಲ್ಲುಗಳಿಂದಲೇ ತುಂಬಿದೆ. ಈ ಮಧ್ಯೆ ಪಾದಯಾತ್ರಿಗಳು ಹೈರಾಣಾಗಿದ್ದಂತೂ ನಿಜ.

ವಯೋವೃದ್ಧರು, ಚಿಕ್ಕ ಮಕ್ಕಳು ಸೇರಿದಂತೆ, ಅನೇಕರು ಜಲ್ಲಿಕಲ್ಲಿನ ಮೇಲೆಯೇ ಬಹಳ ಕಷ್ಟಪಟ್ಟು ನಡೆದರೆ, ಇನ್ನೂ ಕೆಲವರು ನರಗನಹಳ್ಳಿಯ ಮಾರ್ಗದ ಮೂಲಕ ಎರಡು ಕಿಲೋಮೀಟರ್ ಹೆಚ್ಚಿಗೆ ನಡೆದು ಹೇಗೋ ಹರಸಾಹಸ ಪಟ್ಟು ಅರಸೀಕೆರೆ ತಲುಪಿದರು.

ತೌಡೂರಿನಿಂದ ಅರಸೀಕೆರೆ ಮುಟ್ಟಿದ್ದು ನಿಜಕ್ಕೂ ಅಕ್ಷರಶಃ ನರಕ ಎನ್ನಿಸಿದ್ದು, ಸಾವಿರಾರು ಸಂಖ್ಯೆಯ ಪಾದಯಾತ್ರಿಗಳು ಪ್ರತಿವರ್ಷ ಇದೇ ಮಾರ್ಗದಲ್ಲಿ ಕೊಟ್ಟೂರಿಗೆ ಹೋಗುತ್ತಾರೆ ಎಂದು ಗೊತ್ತಿದ್ದರೂ ಕೂಡ ರಸ್ತೆಯನ್ನು ಸಕಾಲದಲ್ಲಿ ಸರಿಪಡಿಸದೇ ಇದ್ದದ್ದು, ಪಾದಯಾತ್ರಿಕರು ಮಾತ್ರ ಸರ್ಕಾರದ ವಿರುದ್ಧ ಹಿಡಿಶಾಪ ಹಾಕುತ್ತಾ, ಪಾದಯಾತ್ರೆ ಮಾಡಿದ್ದು, ಎಲ್ಲೆಡೆಯೂ ಕಂಡುಬಂದಿತು. ಸರ್ಕಾರ ಇನ್ನು ಮುಂದಾದರೂ ಎಚ್ಚೆತ್ತುಕೊಂಡು ಸಕಾಲದಲ್ಲಿ ಕೆಲಸ ಮುಗಿಸಿ ಪಾದಯಾತ್ರಿಗಳಿಗೆ ನೆರವಾಗಬೇಕಿದೆ.

# ಹರಿಹರದಲ್ಲಿ ಮೆಡಿಕಲ್ ಕಾಲೇಜಿಗೆ ಆಗ್ರಹ



ಹರಿಹರ, ಫೆ.23- ಹರಿಹರದಲ್ಲೇ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುವಂತೆ ಆಗ್ರಹಿಸಿ ನಗರದ ಸರ್ಕಾರಿ ಮೆಡಿಕಲ್ ಕಾಲೇಜು ನಾಗರಿಕ ಹೋರಾಟ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಕಳೆದ ಸೋಮವಾರ ಮತ್ತೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವರಿಗೆ, ಸಂಸದರಿಗೆ, ಹರಿಹರದಲ್ಲೇ ಮೆಡಿಕಲ್ ಕಾಲೇಜು ಸ್ಥಾಪನೆ ಆಗಬೇಕು ಎಂದು ಈ ಹಿಂದೆ ಮನವಿ ಸಲ್ಲಿಸಿದ್ದೆವು. ಈ ಉದ್ದೇಶದಿಂದ ಸಹಿ ಸಂಗ್ರಹ ಚಳವಳಿ ಕೂಡಾ ಹಮ್ಮಿಕೊಂಡಿದ್ದೆವು.

ಈ ಹಿನ್ನೆಲೆಯಲ್ಲಿ ಕಳೆದ ವರ್ಷ ಜುಲೈ 13 ರಂದು ಕನಕ ಗುರುಪೀಠದ ಶಾಖಾಮಠ (ಬೆಳ್ಳೂಡಿ) ಸಭಾಂಗಣದಲ್ಲಿ ಹರಿಹರದ ಸುತ್ತಮುತ್ತಲಿನ ವಿವಿಧ ಮಠಗಳ ಪೀಠಾಧಿಪತಿಗಳ ಸಾನ್ನಿಧ್ಯದಲ್ಲಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ಸಂಸದರ ಸಮ್ಮುಖದಲ್ಲಿ ಹರಿಹರದಲ್ಲೇ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುವಂತೆ ಒತ್ತಾಯಿಸಲಾಗಿತ್ತು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಹರಿಹರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಕಷ್ಟದ ವಿಷಯ ಆದರೂ ನಿಮ್ಮ ಮನವಿಯನ್ನು ರಾಜ್ಯ ಸರ್ಕಾರಕ್ಕೆ ಕಳಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಗೌರಾವಾಧ್ಯಕ್ಷ ಎಚ್.ಕೆ.ಕೊಟ್ರಪ್ಪ, ಅಧ್ಯಕ್ಷ ಹೆಚ್. ನಿಜಗುಣ, ಪ್ರಧಾನ ಕಾರ್ಯದರ್ಶಿ ಎನ್.ಹೆಚ್. ಶ್ರೀನಿವಾಸ್ ನಂದಿಗಾವಿ, ಸಂಚಾಲಕರಾದ ಪ್ರವೀಣ್ ಕುಮಾರ್, ಎಕ್ಕೆಗೊಂದಿ ಹೆಚ್.ಬಿ.ರುದ್ರಗೌಡ, ಜಿ. ಮುನೇಂದ್ರ, ಶಿವಕುಮಾರ್, ಸುಬ್ರಹ್ಮಣ್ಯ ನಾಡಿಗೇರ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆ 9ನೇ ಅಡ್ಡರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.


**ಜನತಾವಾಣಿ**

**ಏಜೆಂಟರು ಬೇಕಾಗಿದ್ದಾರೆ**

ಚನ್ನಗಿರಿ, ಸಂತೇಬೆನ್ನೂರು, ಕೆರೆಬಿಳಚಿ, ದಾಗಿನಕಟ್ಟೆ, ನಲ್ಲೂರಿನಲ್ಲಿ ಜನತಾವಾಣಿ ಪತ್ರಿಕೆ ವಿತರಿಸಲು ಠೇವಣಿ ಇಡಬಲ್ಲ, ಆಸಕ್ತ ಏಜೆಂಟರು ಬೇಕಾಗಿದ್ದಾರೆ.

*ಸಂಪರ್ಕಿಸುವ ಸಮಯ : ಬೆಳಿಗ್ಗೆ 11.00 ರಿಂದ 5.30ರವರೆಗೆ*

**ಫೋ.: 08192 254736**



**ಹೆಸರು ಬದಲಾವಣೆ**

ನಾನು ಶ್ರೀ ಸತೀಶ್.ಟಿ. ಬಿನ್ ಕೆ.ಆರ್. ತಿಪ್ಪೇಸ್ವಾಮಿ, ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ ದಿನಾಂಕ:27.12.2015 ರಂದು ನನ್ನ ಪತ್ನಿಯಾದ ಶ್ರೀಮತಿ ಪುಷ್ಪ .ಎನ್ ಇವರಿಗೆ ಹೆಣ್ಣು ಮಗು ಜನನವಾಗಿರುತ್ತದೆ. ಸದರಿ ಮಗುವಿಗೆ ನಾನು ಹಾಗೂ ನನ್ನ ಕುಟುಂಬದವರು ಸೇರಿ, ಕೀರ್ತನ.ಎಸ್ ಎಂಬುದಾಗಿ ನಾಮಕರಣ ಮಾಡಿರುತ್ತೇವೆ. ಆದರೆ ಜನನ ಪ್ರಮಾಣ ಪತ್ರದಲ್ಲಿ ಆರಾಧ್ಯ .ಎಸ್ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ದಿನಾಂಕ:23.02.2022 ರಂದು ನೋಟರಿಯವರ ಸಮ್ಮುಖದಲ್ಲಿ ಇವಳ ಹೆಸರನ್ನು ಕೀರ್ತನ.ಎಸ್ ಎಂಬುದಾಗಿ, ಹೆಸರು ಬದಲಾಯಿಸಿರುತ್ತೇವೆ. ಮುಂದಿನ ಎಲ್ಲಾ ಚಟುವಟಿಕೆಗಳು ಈ ಹೆಸರಲ್ಲಿ ಮುಂದುವರೆಯುತ್ತವೆ.


# 'ಸಂತ ಮಹಾತ್ಮರ ಅಧ್ಯಾತ್ಮಿಕ ಕೊಡುಗೆ' ಕುರಿತು ಸ್ವಾಮೀಜಿಗಳ ಸಮ್ಮಿಲನ

ಸ್ವತಂತ್ರ ಭಾರತದ ಅಮೃತ ಮಹೋತ್ಸವದ ಅಂಗವಾಗಿ 'ಸಂತ ಮಹಾತ್ಮರ ಅಧ್ಯಾತ್ಮಿಕ ಕೊಡುಗೆ' ವಿಷಯ ಕುರಿತು ಸ್ವಾಮೀಜಿಗಳ ಸಮ್ಮಿಲನ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಕ್ಕೆ ನಗರದ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶಿವಧ್ಯಾನ ಮಂದಿರದಲ್ಲಿ ಜರುಗಲಿದೆ.

ಮಾನವನನ್ನು ಮಾಧವನನ್ನಾಗಿ ರೂಪಿಸುವ ನಿಟ್ಟಿನಲ್ಲಿ ತನ್ನದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಈ ಕಾರ್ಯಕ್ರಮ ಆಯೋಜನೆಗೊಂಡಿದೆ.

ಬ್ರಹ್ಮಾಕುಮಾರೀಸ್ ಸಂಸ್ಥೆಯ ಪ್ರಧಾನ ಕೇಂದ್ರ ಅಬು ಪರ್ವತದ ರಾಷ್ಟ್ರೀಯ ಧಾರ್ಮಿಕ ವಿಭಾಗದ ಸಂಪರ್ಕಾಧಿಕಾರಿ ಗಳೂ, ಹಿರಿಯ ಧಾರ್ಮಿಕ ಚಿಂತಕ ರಾಜ ಯೋಗಿ ಬ್ರಹ್ಮಾಕುಮಾರ ರಾಮನಾಥ್‌ಜೀ ಅಧ್ಯಕ್ಷತೆಯಲ್ಲಿ ಬ್ರಹ್ಮಾ ಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜುಋಷಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ದಾವಣಗೆರೆ ಜಿಲ್ಲೆಯ ವಿವಿಧ ಮಠಾಧೀಶರುಗಳು ಸಮಾರಂಭದಲ್ಲಿ ಆಹ್ವಾನಿತರಾಗಿ ಪಾಲ್ಗೊಂಡು ಆಶೀರ್ವಚನ ನೀಡಲಿದ್ದಾರೆ ಎಂದು ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಿವರಿಸಿದ್ದಾರೆ.

ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ, ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶಿವಯೋಗಾಶ್ರಮದ ಚರಮೂರ್ತಿ ಶ್ರೀ ಬಸವ ಪ್ರಭು ಸ್ವಾಮೀಜಿ ಆಹ್ವಾನಿತರಾಗಿದ್ದಾರೆ.



### ನಗರದಲ್ಲಿ ಇಂದು

ಹೂವಿನಹಡಗಲಿ ಮಾನಿಹಳ್ಳಿಯ ಶ್ರೀ ಡಾ. ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರಿನ ಕಟ್ಟೆಮನೆ ಹಿರೇಮಠದ ಶ್ರೀ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ತಾವರೆಕೆರೆ ಶಿಲಾಮಠದ ಶ್ರೀ ಡಾ. ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಚಿಕ್ಕಮಗಳೂರಿನ ಶ್ರೀ ಕರಡಿ ಗವಿಮಠದ ಶ್ರೀ ಶಿವಶಂಕರ ಶಿವಯೋಗಿ ಮಹಾಸ್ವಾಮೀಜಿ ಆಗಮಿಸುವರು.

ದಾವಣಗೆರೆಯ ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ, ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಶಾರದೇಶಾನಂದಜೀ ಮಹಾರಾಜ್, ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ, ಹೊನ್ನಾಳಿಯ ಹಿರೇಮಠ ಹೊಟ್ಯಾಪುರದ ಶ್ರೀ ಗವಿಸಿದ್ದೇಶ್ವರ ಶಿವಾಚಾರ್ಯರು ಭಾಗವಹಿಸುವರು.

ಹೊನ್ನಾಳಿ ರಾಂಪುರ ಬೃಹನ್ಮಠದ ಶ್ರೀ ಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮೀಜಿ, ಹರಿಹರ ತಾಲ್ಲೂಕಿನ ಯಲವಟ್ಟಿಯ ಶ್ರೀ ಯೋಗಾನಂದ ಸ್ವಾಮೀಜಿ, ಹಾನಗಲ್ ತಾಲ್ಲೂಕು ಶ್ರೀ ಶಂಕರಾನಂದ ಸ್ವಾಮೀಜಿ, ಚನ್ನಗಿರಿ ಕೇದಾರ ಶಾಖಾಮಠದ ಶ್ರೀ ಡಾ. ಕೇದಾರಲಿಂಗ ಶಿವ ಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಹದಡಿ ಶ್ರೀ ವಿದ್ಯಾವರೇಣ್ಯ ಶಿವಯೋಗೀಶ್ವರ ಮಠದ ಶ್ರೀ ಮುರುಳೀಧರ ಸ್ವಾಮೀಜಿ ಪಾಲ್ಗೊಳ್ಳುವರು.

ಗೋಕಾಕ್ ಪತಂಜಲಿ ಪೀಠದ ಬ್ರಹ್ಮಲಿಂಗ ದೇವರು, ನಾಗವಂದ ಧರ್ಮಕ್ಷೇತ್ರದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯರು, ರಾಣೇಬೆನ್ನೂರು ಅಂಕಸಾಪುರದ ಶ್ರೀ ಶಿವಾನಂದ ಮಠದ ಪರಮಪೂಜ್ಯ ಸದ್ಗುರು ಶ್ರೀ ಈಶ್ವರಾನಂದ ಸ್ವಾಮೀಜಿ, ಚನ್ನಗಿರಿ ದಾಗಿನಕಟ್ಟೆಯ ಶ್ರೀ ಸದ್ಗುರು ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಹಳೇ ಕುಂದವಾಡ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದ ಧರ್ಮಾಧಿಕಾರಿ ಶ್ರೀ ರಾಜಣ್ಣ ಆಹ್ವಾನಿತರಾಗಿದ್ದಾರೆ.

ಅಧ್ಯಾತ್ಮಿಕ ಚಿಂತಕರು, ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಿನಂತಿಸಿದ್ದಾರೆ.


**ಬೇಕಾಗಿದ್ದಾರೆ**

ದ್ವಿಚಕ್ರ ವಾಹನಗಳ ಮಾರಾಟದ ಶೋರೂಂ ನಲ್ಲಿ ಕೆಲಸ ಮಾಡಲು ಅನುಭವವಿರುವ ಅಥವಾ ಯಾವುದೇ ಪದವಿಯವರೆಗೂ ಓದಿರಬಹುದಾದ, ಕಂಪ್ಯೂಟರ್ ಜ್ಞಾನ ಹೊಂದಿದ ಯುವಕ-ಯುವತಿಯರಿಂದ ಅರ್ಜಿ ಕರೆಯಲಾಗಿದೆ. ಆಸಕ್ತರು ತಮ್ಮ ಪರಿಚಯ ಪತ್ರದೊಂದಿಗೆ **ಪ್ರಕಾಶ್ ಮೋಟಾರ್ಸ್** ಶೋ ರೂಂನ್ನು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ: **94498 65569** ಕ್ಕೆ ಕರೆ ಮಾಡಬಹುದು.

ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು.

Hero

**ಪ್ರಕಾಶಾ ಮೋಟಾರ್ಸ್**

ಅಂಬರ್‌ಕರ್ ಸಮೂಹ ಸಂಸ್ಥೆ

ನಂ. 1945/41 ಉಮಾಪತಿ ಆರ್ಕೇಡ್, ಹರಿಹರ ರಸ್ತೆ, ದಾವಣಗೆರೆ.

# ಸಾಮಾಜಿಕ ನ್ಯಾಯ ಎತ್ತಿಹಿಡಿಯುವುದು ಎಲ್ಲರ ಆದ್ಯ ಕರ್ತವ್ಯ

## 'ವಿಶ್ವ ಸಾಮಾಜಿಕ ನ್ಯಾಯದಿನ' ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್

ದಾವಣಗೆರೆ, ಫೆ.23- ಸಾಮಾಜಿಕ ನ್ಯಾಯ ಎತ್ತಿ ಹಿಡಿಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಹೇಳಿದರು.




ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಸಂಯುಕ್ತವಾಗಿ ನಿನ್ನೆ ಏರ್ಪಡಿಸಿದ್ದ 'ವಿಶ್ವ ಸಾಮಾಜಿಕ ನ್ಯಾಯದಿನ' ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

'ಔಪಚಾರಿಕ ಉದ್ಯೋಗದ ಮೂಲಕ ಸಾಮಾಜಿಕ ನ್ಯಾಯ ಸಾಧಿಸುವುದು' ಸಾಮಾಜಿಕ ನ್ಯಾಯ ದಿನದ ಪ್ರಸಕ್ತ ವರ್ಷದ ಧ್ಯೇಯ ವಾಕ್ಯವಾಗಿದೆ ಎಂದರು.

ಬಡತನ ನಿರ್ಮೂಲನೆ, ಮೂಲಭೂತ ಹಕ್ಕುಗಳಿಂದ ವಂಚಿತರಾದ ವರ್ಗಗಳನ್ನು ರಕ್ಷಣೆ ಮಾಡುವುದು, ಲಿಂಗಭೇದ ತಡೆಯುವುದು, ನಿರುದ್ಯೋಗ ನಿರ್ಮೂ ಲನೆ, ಮಾನವ ಹಕ್ಕುಗಳ ಉಲ್ಲಂಘನೆ ತಡೆಯುವುದು ಸೇರಿದಂತೆ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಲು ಸಾಮಾಜಿಕ ನ್ಯಾಯದಿನದಿಂದ ಸಾಧ್ಯವಾಗು ತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'ಔಪಚಾರಿಕ ಉದ್ಯೋಗದ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸುವುದು' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಹಿರಿಯ ವಕೀಲರಾದ ಎಲ್.ಹೆಚ್. ಅರುಣ್ ಕುಮಾರ್ ಅವರು, ಖಾಸಗೀಕರಣ ಸಾಮಾಜಿಕ ನ್ಯಾಯದ ಬಹುದೊಡ್ಡ ವಿಪರ್ಯಾಸವಾಗಿದೆ. ಖಾಸಗೀಕರಣವೇ ಸಾಮಾಜಿಕ ಅನ್ಯಾಯ ಎಂದು ಪ್ರತಿಪಾದಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ನಡೆಸುವ ಪ್ರಭುತ್ವಕ್ಕೆ ಬದ್ಧತೆ ಇಲ್ಲದ ಕಾರಣ ಜಾತೀಯತೆ ನಿರ್ಮೂಲನೆ ಬದಲು ಜಾತಿಗಳ ಧ್ರುವೀಕರಣವಾಗುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಸಂವಿಧಾನದಡಿಯಲ್ಲಿ ಭ್ರಷ್ಟಾಚಾರ ರಹಿತ, ಜಾತ್ಯತೀತ ಸಮಾಜ ನಿರ್ಮಾಣದ ಕಡೆ ಹೆಜ್ಜೆ ಹಾಕಬೇಕಾಗಿದೆ.ಎಲ್ಲರಿಗೂ ಸಮಾನ ಅವಕಾಶಗಳು ಸಿಗುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳಿರಬೇಕು ಎಂದು ಸಲಹೆ ನೀಡಿದರು.

ಖಾಸಗೀರಕಣ, ಭ್ರಷ್ಟಾಚಾರ, ಜಾತೀಯತೆಗಳ ಕಬಂಧ ಬಾಹುಗಳಿಂದ ಸಾಮಾಜಿಕ ನ್ಯಾಯ ನರಳುವಂತಾಗಿದೆ. ಪ್ರಜೆಗಳು ಸಾಮಾಜಿಕ ನ್ಯಾಯದಿಂದ ವಂಚಿತರಾಗುವುದನ್ನು ತಡೆಗಟ್ಟುವ ಅವಶ್ಯವಿದೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ್ ಮಾತನಾಡಿ, ನಿರುದ್ಯೋಗಿ ಎಂಬ ಮಾನಸಿಕ ಸ್ಥಿತಿಯಿಂದ ಹೊರಬರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುವ ಸಾಮಾಜಿಕ ಭದ್ರತೆ ಬೇಕಾಗಿದೆ. ಬದ್ಧತೆ ಇದ್ದರೆ ಭದ್ರತೆ ತಾನಾಗಿಯೇ ಬರುತ್ತದೆ. ತನ್ಮೂಲಕ ಸುಸ್ಥಿರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಬಿ.ಪಿ. ಕುಮಾರ್ ಮಾತನಾಡಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ ಜನರಿಗೆ ಸಾಮಾಜಿಕ ನ್ಯಾಯ ಎಷ್ಟರಮಟ್ಟಿಗೆ ಸಿಗುತ್ತದೆ ಎಂಬುದರ ಬಗ್ಗೆ ಅವಲೋಕನ ಮಾಡಿಕೊಳ್ಳಬೇಕಾಗಿದೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ ವಹಿಸಬೇಕಾಗಿದೆ ಎಂದರು.

ಸಹನಾ ಮತ್ತು ಅಂಜನಾ ಪ್ರಾರ್ಥಿಸಿದರು. ಪ್ರೊ. ಆರ್. ಆರ್. ಶಿವಕುಮಾರ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಮೂಲ್ಯ ನಿರೂಪಿಸಿದರು. ಪ್ರೊ. ಪಾಲಾಕ್ಷ ವಂದಿಸಿದರು. ನ್ಯಾಕ್ ಸಂಯೋಜಕರಾದ ಪ್ರೊ.ಜಿ.ಸಿ. ನೀಲಾಂಬಿಕೆ, ಕನ್ನಡ ವಿಭಾಗದ ಮುಖ್ಯಸ್ಥ ಡಾ ರಣಧೀರ ಉಪಸ್ಥಿತರಿದ್ದರು.

# ಪದವಿ ಅಂತಿಮ ಪರೀಕ್ಷೆ ಮುಂದೂಡುವ ಆದೇಶ ಅನುಮೋದಿಸಲು ಆಗ್ರಹ

ದಾವಣಗೆರೆ, ಫೆ.23- ಪದವಿ ಅಂತಿಮ ಪರೀಕ್ಷೆಗಳನ್ನು ಮುಂದೂಡುವಂತೆ ಆದೇಶಿಸಿರುವ ರಾಜ್ಯ ಸರ್ಕಾರದ ಸುತ್ತೋಲೆಯನ್ನು ಅನುಮೋದಿಸುವಂತೆ ದಾವಣಗೆರೆ ವಿಶ್ವವಿದ್ಯಾಲಯಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಇಂದು ವಿದ್ಯಾರ್ಥಿಗಳು ಮನವಿ ಮಾಡಿದರು.



ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಶೈಕ್ಷಣಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹಲವು ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕನಿಷ್ಟ ತರಗತಿಗಳು ನಡೆದಿರುವುದರಿಂದ ಪರೀಕ್ಷೆಯ ತಯಾರಿಗೆ ಸೂಕ್ತ ಕಾಲಾವಕಾಶ ನೀಡಿ, ನಂತರವೇ ಪರೀಕ್ಷೆಗಳನ್ನು ನಿಗದಿಪಡಿಸಬೇಕೆಂದು ವಿದ್ಯಾರ್ಥಿಗಳು ಆಗ್ರಹಿಸಿದರು.

ಈ ಕುರಿತು ವಿಶ್ವವಿದ್ಯಾಲಯ ಹಾಗೂ ರಾಜ್ಯ ಸರ್ಕಾರಕ್ಕೆ ಈಗಾಗಲೇ ವಿದ್ಯಾರ್ಥಿಗಳು ಮನವಿ ನೀಡಿದ್ದರು. ಈಗ ರಾಜ್ಯ ಸರ್ಕಾರವು ಪರೀಕ್ಷೆಗಳನ್ನು ಮುಂದೂಡುವಂತೆ ಆದೇಶ ಹೊರಡಿಸಿದೆ.

ಆ ಮೂಲಕ ವಿದ್ಯಾರ್ಥಿಗಳ ಬೇಡಿಕೆಯನ್ನು ಎತ್ತಿ ಹಿಡಿದಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಕೂಡಲೇ ಪರಿಷ್ಕೃರಿತ ವೇಳಾಪಟ್ಟಿಯನ್ನು ಪ್ರಕಟಿಸಿ ವಿದ್ಯಾರ್ಥಿಗಳ ಗೊಂದಲವನ್ನು ಪರಿಹರಿಸುವಂತೆ ದಾವಣಗೆರೆ ವಿವಿ ಕುಲಪತಿ ಡಾ. ಎ.ಹೆಚ್. ಅನಿತಾ ಅವರಿಗೆ ಮನವಿ ಮಾಡಿದರು.

ಮನವಿಗೆ ಸ್ಪಂದಿಸಿದ ಕುಲಪತಿಗಳು, ರಾಜ್ಯ ಸರ್ಕಾರದ ಆದೇಶದಂತೆ ಒಂದು ತಿಂಗಳು ಕಾಲ ಮುಂದೂಡುವುದಾಗಿ ಭರವಸೆ ನೀಡಿದರು.

# ರಾಣೇಬೆನ್ನೂರು: ವೀರಭದ್ರೇಶ್ವರ ಸ್ವಾಮಿ ಗುಗ್ಗಳ ಮಹೋತ್ಸವ



ರಾಣೇಬೆನ್ನೂರು,ಫೆ.23- ಇಲ್ಲಿನ ವಾಗೀಶ ನಗರದ ಶ್ರೀ ವೀರಭದ್ರ ದೇವಸ್ಥಾನದಲ್ಲಿ ಶರಭಿ ಗುಗ್ಗಳ ಮಹೋತ್ಸವ ಮಂಗಳವಾರ ಶದ್ಧಾ - ಭಕ್ತಿಯಿಂದ ನಡೆಯಿತು.

ಇಲ್ಲಿನ ಮೃತ್ಯುಂಜಯನಗರದ ಆದಿಶಕ್ತಿ ದೇವಸ್ಥಾನದ ಅರ್ಚಕ ಸೋಮಯ್ಯಸ್ವಾಮಿ ಅವರ ಮನೆಯಿಂದ ಶರಭಿ ಗುಗ್ಗಳ ಹಾಗೂ ಪಾಲಕಿ ಉತ್ಸವ ಸಕಲ ವಾದ್ಯಗಳೊಂದಿಗೆ ಪ್ರಾರಂಭವಾಯಿತು. ಮಾರುತಿ ನಗರದ ಬಸವಣ್ಣೆಪ್ಪ ಅಟವಾಳಗಿ ಸಹೋದರರು ವೀರಗಾಸೆ ಮತ್ತು ಪುರುವಂತಿಕೆ ನಡೆಸಿಕೊಟ್ಟರು.

ಚನ್ನೇಶ್ವರ ಮಠದ ಸಂಸ್ಕೃತ ಪಾಠ ಶಾಲೆಯ ವಟುಗಳು ವೇದ ಘೋಷ ಮಾಡಿದರು. ಹಿರೇಕೆರೂರು ತಾಲ್ಲೂಕಿನ ನಿಟ್ಟೂರ ಗ್ರಾಮದ ಸುಭದ್ರಮ್ಮ ಗದಿಗೆಪ್ಪ ಪುರದಾಳ ಹಾಗೂ ಕುಟುಂಬದವರು ಶರಭಿ ಗುಗ್ಗಳ ಸೇವೆ ನಡೆಸಿಕೊಟ್ಟರು.

ಹೊನ್ನಾಳಿ ಹಿರೇಕಲ್ಮಠದ ಒಡೆಯರ ಡಾ. ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ ಶರಭಿ ಗುಗ್ಗಳ ಮಹೋತ್ಸವಕ್ಕೆ ಚಾಲನೆ ನೀಡಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ವೀರೇಶ (ರಾಜಣ್ಣ) ಮೋಟಗಿ ಅಧ್ಯಕ್ಷತೆ ವಹಿಸಿದ್ದರು.

ನಗರಸಭೆ ಅಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ, ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಶಿವಣ್ಣ ನಂದೀಹಳ್ಳಿ, ಪಂಚಮಸಾಲಿ ಸಮಾಜದ ಅಧ್ಯಕ್ಷ ಸಿದ್ದು ಚಿಕ್ಕಬಿದರಿ, ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ವೀರೇಶ ಜಂಬಿಗಿ, ವರ್ತಕರಾದ ಪ್ರಕಾಶ ಗುಪ್ತಾ, ಎಪಿಎಂಸಿ ವರ್ತಕರ ಸಂಘದ ಅಧ್ಯಕ್ಷ ಎಸ್.ಕೆ. ಉಪ್ಪಿನ, ವೀರಣ್ಣ ಪಟ್ಟಣಶೆಟ್ಟಿ ಅವರನ್ನು ಸ್ವಾಮೀಜಿ ಸನ್ಮಾನಿಸಿದರು.

ವಿಧಾನಸಭೆ ಮಾಜಿ ಸ್ಪೀಕರ್ ಕೆ.ಬಿ.ಕೋಳಿವಾಡ, ಸಂಗನಬಸಪ್ಪ (ಬಾಬು) ಐರಣಿ, ಎಸ್.ಎಸ್. ರಾಮಲಿಂಗಣ್ಣನವರ, ಬಿ.ಎಸ್.ಪಟ್ಟಣಶೆಟ್ಟಿ, ಎಂ. ಸಿದ್ದಲಿಂಗಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

# 33 ಕೋಟಿ ಬಿಡುಗಡೆ : ಸಂಸದರ ಹೇಳಿಕೆ ಸುಳ್ಳು

ಹರಿಹರ, ಫೆ. 23 - ಹರಿಹರ ತಾಲ್ಲೂಕಿನ ವಿವಿಧ ರಸ್ತೆಗಳ ಅಭಿವೃದ್ಧಿಗೆ 33 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿರುವುದು ಶುದ್ಧ ಸುಳ್ಳು ಎಂದು ಶಾಸಕ ಎಸ್. ರಾಮಪ್ಪ ಹೇಳಿದ್ದಾರೆ.



ಶಾಸಕ ಎಸ್. ರಾಮಪ್ಪ

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು.

ಹರಿಹರ ವಿಧಾನಸಭಾ ಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ 33 ಕೋಟಿ ರೂ. ಬಿಡುಗಡೆಯಾಗಿದ್ದು, ವಾರದೊಳಗೆ ಕಾಮಗಾರಿಗಳ ಶಂಕುಸ್ಥಾಪನೆ ಮಾಡುವುದಾಗಿ ಸಂಸದರು ಹೇಳಿದ್ದು ಶುದ್ಧ ಸುಳ್ಳು ಹೇಳಿಕೆಯಾಗಿದೆ ಎಂದವರು ಹೇಳಿದ್ದಾರೆ.

ನಾನು ಈ ಹಿಂದೆ ಹೋರಾಟ ಮಾಡಿ ಎಕ್ಕೇಗೊಂದಿ - ನಂದಿಗುಡಿ ರಸ್ತೆಯ ಅಭಿವೃದ್ಧಿಗೆ 13.50 ಕೋಟಿ ರೂ. ಅನುದಾನವನ್ನು ಅಂದಿನ ಲೋಕೋಪಯೋಗಿ ಇಲಾಖೆ ಸಚಿವರಾಗಿದ್ದ ಹೆಚ್.ಡಿ.ರೇವಣ್ಣ ಅವರ ಗಮನಕ್ಕೆ ತಂದು ಅನುದಾನ ಬಿಡುಗಡೆ ಮಾಡಿಸಿದ್ದನ್ನು ಬಿಜೆಪಿ ಸರ್ಕಾರ ಆಡಳಿತದ ಸಮಯದಲ್ಲಿ ಅದನ್ನು ತಡೆದರು ಎಂದು ರಾಮಪ್ಪ ಹೇಳಿದ್ದಾರೆ.

ಚಿಕ್ಕಬಿದರಿ - ಕಕ್ಕರಗೊಳ್ಳದವರಗೆ ರಸ್ತೆ ಅಭಿವೃದ್ಧಿ ಮಾಡುವುದಕ್ಕೆ ನಾನು ಲೋಕೋಪಯೋಗಿ ಸಚಿವರಾದ ಗೋವಿಂದ ಕಾರಜೋಳ ಅವರ ಹತ್ತಿರ ಓಡಾಡಿ, ಸಾರಥಿ - ಚಿಕ್ಕಬಿದರಿ ಕಾಮಗಾರಿಗೆ 10 ಕೋಟಿ ಹಣ ಬಿಡುಗಡೆ ಮಾಡಿಸಿದ್ದು ಮತ್ತು ಎಂ.ಎಲ್.ಸಿ. ಕೊಂಡಜ್ಜಿ ಮೋಹನ್ ಅವರು ಬಿಡುಗಡೆ ಮಾಡಿಸಿದ್ದು 5 ಕೋಟಿ ಅನುದಾನ. ಇದನ್ನು ನಾನು ಬಿಡುಗಡೆ ಮಾಡಿಸಿದ್ದು ಎಂದು ಸಿದ್ದೇಶ್ವರ ಹೇಳುತ್ತಾರೆ ಎಂದು ರಾಮಪ್ಪ ಹೇಳಿದ್ದಾರೆ.

ಸಂಸದರಿಂದ ಹರಿಹರ ತಾಲ್ಲೂಕಿನಲ್ಲಿ ಇದುವರೆಗೆ ಒಂದೂ ಕಾರ್ಖಾನೆ ಪ್ರಾರಂಭಿಸಲು ಆಗಿಲ್ಲ.

ಹರಿಹರ ನಗರದಲ್ಲಿ ವೈದ್ಯಕೀಯ ಕಾಲೇಜು ಮಂಜೂರು ಮಾಡಿಸುವುದಕ್ಕೆ ಸರ್ಕಾರದ ಮಾನದಂಡಗಳ ಪ್ರಕಾರ ಬರಲ್ಲ ಎಂದು ಸಬೂಬು ಹೇಳುತ್ತಿದ್ದಾರೆ ಎಂದವರು ಆರೋಪಿಸಿದರು.

ಮೊನ್ನೆ ಹರಿಹರ ನಗರಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಳಿ 100 ಕೋಟಿ ರೂ. ಹಣ ಬಿಡುಗಡೆ ಮಾಡುವಂತೆ ಕೇಳಿಕೊಂಡಾಗ ಗ್ರಾಮೀಣ ಪ್ರದೇಶಕ್ಕೆ 50 ಕೋಟಿ, ನಗರದ ಪ್ರದೇಶಕ್ಕೆ 50 ಕೋಟಿ ಬಿಡುಗಡೆ ಮಾಡುವುದಾಗಿ ಹೇಳಿದರು. ಆದರೆ, ಈಗ 25 ಲಕ್ಷ ರೂ. ನೀಡಿದ್ದಾರೆ. ಉಳಿದ ಹಣವನ್ನು ಯಾವತ್ತು ಬಿಡುಗಡೆ ಮಾಡುತ್ತಾರೋ ಕಾದು ನೋಡಬೇಕು ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ಟಿಕೆಟ್ ಪಡೆಯಲು 2013 ರಲ್ಲಿ 18 ಆಕಾಂಕ್ಷಿತರು ಇದ್ದರು. 2018 ರಲ್ಲಿ 6 ಆಕಾಂಕ್ಷಿಗಳು ಇದ್ದರು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 4 ರಿಂದ 6 ಆಕಾಂಕ್ಷಿಗಳು ಇದ್ದಾರೆ. ಯಾವ ಅಭ್ಯರ್ಥಿಗಳು ನ್ಯಾಯದ ಪರವಾಗಿ, ಜನರ ಪರವಾಗಿ, ಅಭಿವೃದ್ಧಿ ಚಿಂತನೆಯನ್ನು ಮಾಡುತ್ತಾರೋ ಅವರನ್ನು ಗುರುತಿಸಿ, ಪಕ್ಷ ಟಿಕೆಟ್ ನೀಡುತ್ತದೆ. ಚುನಾವಣೆ ಸಮಯದಲ್ಲಿ ಈ ಬಗ್ಗೆ ಯೋಚನೆ ಮಾಡೋಣ. ನಾನು ಯಾರಿಗೂ ಆಕಾಂಕ್ಷಿ ಆಗಬೇಡಿ ಎಂದು ಹೇಳಿಲ್ಲ. ಕಾಗಿನಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಜಗದ್ಗುರುಗಳು ಈ ಬಾರಿ ಬೇರೆಯವರಿಗೆ ಹಾಗೂ ಯುವಕರಿಗೆ ಬಿಟ್ಟು ಕೊಡಿ ಎಂದು ಹೇಳುವ ಸಾಧ್ಯತೆ ಕಡಿಮೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಅಬ್ದುಲ್ ಅಲಿಂ, ಮಾಜಿ ಸದಸ್ಯ ಮಹಮ್ಮದ್ ಸಿಗ್ಬತ್ ಉಲ್ಲಾ, ಅಂಜುಮನ್ ಸಂಸ್ಥೆಯ ಅಧ್ಯಕ್ಷ ಮಹಮ್ಮದ್ ಫೈರೋಜ್, ಸನಾವುಲ್ಲಾ ಮತ್ತಿತರರು ಉಪಸ್ಥಿತರಿದ್ದರು.



ಯಕ್ಕನಹಳ್ಳಿಯಲ್ಲಿ ಭತ್ತದ ನಾಟಿ

ಹೊನ್ನಾಳಿ ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಗದ್ದೆಯೊಂದರಲ್ಲಿ ಸೋಮವಾರ ಭತ್ತದ ನಾಟಿಗೆ ಸಸಿಗಳನ್ನು ಕೀಳುತ್ತಿರುವ ದೃಶ್ಯ.

## ದಾವೂದ್ ಸಂಪರ್ಕ: ಮಹಾರಾಷ್ಟ್ರ ಸಚಿವ ಮಲಿಕ್ ಬಂಧನ

ಮುಂಬೈ, ಫೆ. 23 – ತಲೆಮರೆಸಿಕೊಂಡಿರುವ ಭೂಗತ ದಾವೂದ್ ಇಬ್ರಾಹಿಂ ಚಟುವಟಿಕೆಗಳು ಹಾಗೂ ಮುಂಬೈ ಭೂಗತ ಜಗತ್ತಿನ ಸಂಪರ್ಕದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ, ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಬಂಧಿಸಿದೆ.

ದಕ್ಷಿಣ ಮುಂಬೈನಲ್ಲಿರುವ ಜಾರಿ ನಿರ್ದೇಶನಾಲಯದ ಕಚೇರಿಯಲ್ಲಿ ಮಲಿಕ್ ವಿಚಾರಣೆ ನಡೆಸಿದ ನಂತರ ಬಂಧಿಸಲಾಗಿದೆ. ನಂತರ ವೈದ್ಯಕೀಯ ತಪಾಸಣೆ ನಡೆಸಿ, ನ್ಯಾಯಾಲಯದ ಎದುರು ಹಾಜರು ಪಡಿಸಲಾಗಿದೆ.

ನ್ಯಾಯಾಲಯ ಮಾರ್ಚ್ 3 ರವರೆಗೆ ಮಲಿಕ್‌ರನ್ನು ಜಾರಿ ನಿರ್ದೇಶನಾಲಯದ ಕಸ್ಟಡಿಗೆ ವಹಿಸಿದೆ.

## ನಗರದಲ್ಲಿ ಇಂದಿನಿಂದ ರಾಜ್ಯ ಮಟ್ಟದ ಖಾದಿ ಉತ್ಸವ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಬೆಂಗಳೂರು ವತಿಯಿಂದ ಭಾರತಾಂಬೆ ಮಹಿಳಾ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಸಂಘದ ಮೂಲಕ ಜಿಲ್ಲೆಯಲ್ಲಿ ಇಂದಿನಿಂದ ಮಾರ್ಚ್ 10 ರವರೆಗೆ ಸರ್ಕಾರಿ ಕಾಲೇಜ್ ಮೈದಾನದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳ ಪ್ರದರ್ಶನ ಹಾಗೂ ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ. ಎಂ.ಎಸ್.ಎಂ.ಇ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ದೇಶಕ ವಿನೋತ್‌ಪ್ರಿಯ ಅವರು ಸಂಜೆ 5 ಗಂಟೆಗೆ ಖಾದಿ ಉತ್ಸವದ ಉದ್ಘಾಟನೆ ನೆರವೇರಿಸುವರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

## ಪ್ರಕರಣ ಇತ್ಯರ್ಥದವರೆಗೆ ಸಮವಸ್ತ್ರ ಕಡ್ಡಾಯ

ಬೆಂಗಳೂರು ಫೆ. 23 – ಹಿಜಾಬ್ ಪ್ರಕರಣ ಇತ್ಯರ್ಥ ಪಡಿಸುವವರೆಗೂ ಶಾಲಾ - ಕಾಲೇಜುಗಳಲ್ಲಿ ನಿಗದಿತ ಸಮವಸ್ತ್ರ ಕಡ್ಡಾಯ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಪದವಿ ಕಾಲೇಜೇ ಆಗಲೀ ಅಥವಾ ಪಿ.ಯು. ಕಾಲೇಜೇ ಆಗಿರಲಿ, ಸಮವಸ್ತ್ರ ನಿಗದಿಯಾಗಿ ದ್ದರೆ ಪ್ರಕರಣ ಇತ್ಯರ್ಥ ಪಡಿಸುವ ವರೆಗೆ ಅದನ್ನು ಪಾಲಿಸಲೇ ಬೇಕು ಎಂದು ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರ ನೇತೃತ್ವ ಪೀಠ ತಿಳಿಸಿದೆ. ಶಾಲೆ ಯಲ್ಲಿ ಹಿಜಾಬ್ ಧರಿಸಲು ಅನು ಮತಿ ನೀಡುವಂತೆ ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಮೊಹಮ್ಮದ್ ತಾಹಿರ್ ಎಂಬುವವರು ಮನವಿ ಮಾಡಿಕೊಂಡಾಗ ನ್ಯಾಯಾಲಯ ಈ ನಿಲುವು ತಳೆದಿದೆ. ಹಿಜಾಬ್ ಕುರಿತ ಮಧ್ಯಂತರ ಆದೇಶ ಕೇವಲ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ ಎಂದೂ ನ್ಯಾಯಾಲಯ ಹೇಳಿದೆ.

# ಅಂದು ಚಲ್ ಮೇರಿ ಲೂನಾ ಇಂದು ಕೈನೆಟಿಕ್ ಗ್ರೀನ್ ಎಲೆಕ್ಟ್ರಿಕ್ ವಾಹನ







40 ವರ್ಷಗಳ ಹಿಂದೆ "ಲೂನಾ ಕರತಿ ಪಕ್ಕಾವಾದ, ಕರ್ಚಾಕಂ, ಮಜಭೂತಿ ಜ್ಯಾದಾ, ಶಾನ್ ಸೆ ಬೋಲೋ ಚಲ್ ಮೇರಿ ಲೂನಾ" ಈ ವಾಕ್ಯ ಎಲ್ಲರ ಬಾಯಿ ಮಾತಾಗಿದ್ದನ್ನು ಜನ ಇಂದಿಗೂ ಮರೆತಿಲ್ಲ. 1980-90 ರಲ್ಲಿ ಜನ ಸಾಮಾನ್ಯರು ಕಾಲು ನಡಿಗೆ, ಸೈಕಲ್ ಸವಾರಿಯನ್ನು ಚಲ್ ಮೇರಿ ಲೂನಾ ಆಗಿ ಬದಲಾಯಿಸಿಕೊಂಡಿದ್ದು, ಬಹು ಜನಪ್ರಿಯ ಸಂಗತಿ. ಅಂದು ಕೈನೆಟಿಕ್ ಲೂನಾ ಭಾರತದ ಪ್ರಪ್ರಥಮ ಮೊಪೆಡ್ ಮಾರುಕಟ್ಟೆಯ ಲೀಡರ್ ಆಗಿತ್ತು. ಜನ ಮಾನಸದಲ್ಲಿ ಸದಾ ಹಸಿರಾಗಿಸಿದ ಕೈನೆಟಿಕ್ ಲೂನಾ 21ನೇ ಶತಮಾನದಲ್ಲಿ ಪರಿಸರ ಕಾಳಜಿ, ಪೆಟ್ರೋಲ್, ಡೀಸೆಲ್ ಅಭಾವದ ಮುನ್ನೆಚ್ಚರಿಕೆಗಳನ್ನು ಗಮನದಲ್ಲಿಸಿಕೊಂಡು ಕೈನೆಟಿಕ್ ಗ್ರೀನ್, ಕೈನೆಟಿಕ್ ಎಲೆಕ್ಟ್ರಿಕ್ ದ್ವಿಚಕ್ರ ವಾಹನವಾಗಿ ಅವತರಿಸಿದೆ. ಮಧ್ಯಮ ವರ್ಗದ ಜನ ಸಾಮಾನ್ಯರ ಕನಸನ್ನು ದಶಕಗಳ ಕಾಲ ಈಡೇರಿಸಿದ ಪೂನಾದ ಕೈನೆಟಿಕ್ ಇಂಜಿನಿಯರಿಂಗ್ ಕಂಪನಿ ಈಗ ತನ್ನ ಮತ್ತೊಂದು ಬಹು ದೊಡ್ಡ ಸಾಧನೆಯಾಗಿ ಕೈನೆಟಿಕ್ ಗ್ರೀನ್, ಕೈನೆಟಿಕ್ ಎಲೆಕ್ಟ್ರಿಕ್ ವಾಹನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ. ಈ ನೂತನ ವಾಹನ ಲಕ್ಷಾಂತರ ಪರಿಸರ ಪ್ರಿಯರ ಪ್ರೀತಿಯ ವಾಹನವಾಗಲಿದೆ.

ಪರಿಸರ ಪ್ರೇಮಿ 'ಕೈನೆಟಿಕ್ ಗ್ರೀನ್ ಎನರ್ಜಿ ಮತ್ತು ಪವರ್ ಸಲ್ಯೂಷನ್ ಲಿಂ., ಕಂಪನಿ, ಕೈನೆಟಿಕ್ ಇನ್ನೋವೇಷನ್ ಪಾರ್ಕ್, ಚಿಂಚವಾಡ್ ಪುಣೆ- 411019", ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ನೂತನ ಶೋ ರೂಂಗಳನ್ನು ಆರಂಭಿಸುತ್ತಿದೆ. "ಶ್ರೀ ಮಲ್ಲಿಕಾರ್ಜುನ ಮೋಟಾರ್ಸ್ ಮತ್ತು ಸ್ಕೂಟರ್ ಮಾರ್ಟ್' ದಾವಣಗೆರೆ ಜಿಲ್ಲೆಯ ಪಿ.ಬಿ. ರಸ್ತೆಯಲ್ಲಿ ಕೈನೆಟಿಕ್ ಗ್ರೀನ್, ಕೈನೆಟಿಕ್ ಎಲೆಕ್ಟ್ರಿಕ್ಸ್ ವಾಹನಗಳ ಅಧಿಕೃತ ಡೀಲರ್ಸ್ ಆಗಿ ನೇಮಕವಾಗಿ ಮಾರಾಟದ ಶೋ ರೂಂ ಕಳೆದ 30 ವರ್ಷಗಳಿಂದ 50 ಸಿಸಿ ದ್ವಿಚಕ್ರ ವಾಹನಗಳಿಂದ 50 ಟನ್ ಸಾಮರ್ಥ್ಯದ ದಶ ಚಕ್ರಗಳ ಜನಪ್ರಿಯ ವಾಹನಗಳ ಅಧಿಕೃತ ಮಾರಾಟಗಾರರಾಗಿ, ರಾಜ್ಯದಲ್ಲಿ ಆಟೋ ಮೊಬೈಲ್ ಕ್ಷೇತ್ರದ ಹಿರಿಯ ಕೈಗಾರಿ ಕೋದ್ಯಮಿಗಳಾದ ಶ್ರೀ ಎನ್.ಜೆ. ಗುರುಸಿದ್ದಯ್ಯನವರು ಶ್ರೀ ಮಲ್ಲಿಕಾರ್ಜುನ ಸಮೂಹ ಸಂಸ್ಥೆಗಳ ಅಧ್ಯಕ್ಷರು. ಇವರು ಈ ನೂತನ ವಾಹನಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತಿದ್ದಾರೆ. ಆಸಕ್ತರು ಈ ವಾಹನಗಳ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಪಡೆದು, ನಮ್ಮ ಶೋರೂಂನಲ್ಲಿ ಬುಕ್ಕಿಂಗ್ ಮಾಡಬಹುದು. ಬನ್ನಿ ವೀಕ್ಷಿಸಿ, ನೂತನ ವಾಹನ ಸವಾರಿ ಮಾಡಿ ಎಂದು ಈ ಮೂಲಕ ಎಲ್ಲರನ್ನೂ ಆಹ್ವಾನಿಸುತ್ತಿದ್ದಾರೆ.

- ಎನ್.ಜೆ. ಗುರುಸಿದ್ದಯ್ಯ

ಫೋ. : 98440 63379, 97411 13055, 98869 78843

# ದಾವಣಗೆರೆ ವಿವಿಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಆಗ್ರಹ

## ಆಂತರಿಕ ಪರೀಕ್ಷೆ ಬಹಿಷ್ಕರಿಸಿ ಎಂಎಸ್‌ಸಿ ವಿದ್ಯಾರ್ಥಿಗಳ ಧರಣಿ

ದಾವಣಗೆರೆ, ಫೆ.23- ದಾವಣಗೆರೆ ವಿಶ್ವ ವಿದ್ಯಾನಿಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸುವಂತೆ ಒತ್ತಾಯಿಸಿ, ತಾಲ್ಲೂಕಿನ ತೋಳಹುಣಸೆಯ ಶಿವಗಂಗೋತ್ರಿಯ ದಾವಣಗೆರೆ ವಿವಿ ಕ್ಯಾಂಪಸ್‌ನಲ್ಲಿ ಎಂಎಸ್‌ಸಿ ಪ್ರಥಮ ವರ್ಷದ ಗಣಿತ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಇಂದು ಆಂತರಿಕ ಪರೀಕ್ಷೆ ಬಹಿಷ್ಕರಿಸಿ, ಪ್ರತಿಭಟನಾ ಧರಣಿ ನಡೆಸಿದರು.

ತರಗತಿಯಲ್ಲಿ ಕುಳಿತುಕೊಳ್ಳಲು ಡಯಾಸ್‌ಗಳಿಲ್ಲ. ಬೋಧಕರಿಗೆ ಪಾಠ ಮಾಡುವುದಕ್ಕೆ ಪೋಡಿಯಂ ಇಲ್ಲ. ಬ್ಲಾಕ್ ಬೋರ್ಡ್ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳೂ ಸರಿಯಾಗಿ ಇಲ್ಲ. ಈ ಬಗ್ಗೆ ಸಾಕಷ್ಟು ಬಾರಿ ದಾವಣಗೆರೆ ವಿಶ್ವ ವಿದ್ಯಾನಿಲಯದ ಆಡಳಿತ ಮಂಡಳಿ ಗಮನಕ್ಕೆ ತಂದರೂ ಸ್ಪಂದಿಸಿಲ್ಲ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಆರೋಪಿಸಿದರು.

ಈಗಾಗಲೇ ತರಗತಿಗಳು ಆರಂಭವಾಗಿ ಎರಡೂವರೆ ತಿಂಗಳೇ ಕಳೆದಿವೆ. ಆಗಿನಿಂದಲೂ ವಿವಿ ಕುಲಪತಿಗಳು ಸೇರಿದಂತೆ, ಅನೇಕರಿಗೆ ಡಯಾಸ್, ಬ್ಲಾಕ್ ಬೋರ್ಡ್, ಪೋಡಿಯಂ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವಂತೆ ಅನೇಕ ಸಲ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಮೂಲ ಸೌಕರ್ಯಗಳಿಗಾಗಿ ಅನಿವಾರ್ಯವಾಗಿ ಆಂತರಿಕ ಪರೀಕ್ಷೆಗಳನ್ನು ಬಹಿಷ್ಕರಿಸಿ ಹೋರಾಟ ನಡೆಸಿದ್ದೇವೆ ಎಂದರು.

ನಂತರ ವಿವಿಯ ಆಡಳಿತ ವಿಭಾಗದ ಭರವಸೆ ಮೇರೆಗೆ ವಿದ್ಯಾರ್ಥಿಗಳು ತಾತ್ಕಾಲಿಕವಾಗಿ ಹೋರಾಟವನ್ನು ಹಿಂಪಡೆದಿದ್ದಾರೆ.

## ಹರ್ಷ ಪ್ರಕರಣ : ಇನ್ನಿಬ್ಬರ ಬಂಧನ

ಶಿವಮೊಗ್ಗ, ಫೆ. 23 – ಭಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಗೆ ಸಂಬಂಧಿಸಿದಂತೆ ಇನ್ನಿಬ್ಬರು ವ್ಯಕ್ತಿಗಳನ್ನು ಶಿವಮೊಗ್ಗದಲ್ಲಿ ಬಂಧಿಸಲಾಗಿದೆ. ಈ ನಡುವೆ ಜಿಲ್ಲಾ ಅಧಿಕಾರಿಗಳು ನಗರದಲ್ಲಿ ಹೇರಿರುವ ನಿಷೇಧಾಜ್ಞೆಯನ್ನು ಶುಕ್ರವಾರ ದವರೆಗೆ ವಿಸ್ತರಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ಒಟ್ಟು ಎಂಟು ಜನರು ಅಪರಾಧಿಕ ಹಿನ್ನೆಲೆ ಹೊಂದಿದ್ದಾರೆ ಎಂದು ತಿಳಿಸಿದ್ದಾರೆ.

## ಆವರಗೊಳ್ಳದಲ್ಲಿ ಇಂದು ಕಂಕಣ ವಿಸರ್ಜನೆ

ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ರಥೋತ್ಸ ವದ ಅಂಗವಾಗಿ ಇಂದು ಕಂಕಣ ವಿಸರ್ಜನೆ ನಡೆಯಲಿದೆ.

## ಬ್ರಾಹ್ಮಣ ಸಮಾಜದಿಂದ 26 ರಂದು ಪುರಸ್ಕಾರ, ಭಗವದ್ಗೀತೆ ಕಂಠಪಾಠ

ರಾಣೇಬೆನ್ನೂರು, ಫೆ.23- ತಾಲ್ಲೂಕು ಬ್ರಾಹ್ಮಣ ಸಮಾಜದಿಂದ ಕೋಟೆ ಶಂಕರ ಮಠದಲ್ಲಿ ಇದೇ ದಿನಾಂಕ 26 ರಂದು ಸಂಜೆ ಪ್ರತಿಭಾ ಪುರಸ್ಕಾರ ಹಾಗೂ ಭಗವದ್ಗೀತೆ ಕಂಠಪಾಠ ಸ್ಪರ್ಧೆ ನಡೆಯಲಿದೆ.

ತಾಲ್ಲೂಕು ಅಧ್ಯಕ್ಷ ದತ್ತಾತ್ರೇಯ ನಾಡಿಗೇರ ಅಧ್ಯಕ್ಷತೆ ವಹಿಸಲಿದ್ದು. ರಾಜ್ಯ ಪದಾಧಿಕಾರಿಗಳಾದ ಪ್ರಮೋದ ಮನೋಳಿ, ವೆಂಕಟೇಶನಾಯ್ಕ, ಜಿ.ಎಲ್. ನಾಡಿಗೇರ, ಉಮೇಶ ವಿಶ್ವರೂಪ ಪಾಲ್ಗೊಳ್ಳುವರು. ರಾಘವೇಂದ್ರ ಕುಲಕರ್ಣಿ, ಶ್ರೀ ಪಾದ ಕುಲಕರ್ಣಿ, ಜಯತೀರ್ಥಾಚಾರ್ ಚಿಂದಿ ಅವರುಗಳಿಗೆ ಸನ್ಮಾನ ನಡೆಯಲಿದೆ.

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

ಚಾಮರಾಜಪೇಟೆ, ದಾವಣಗೆರೆ - 577 001. 96861 95327

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte